

## ಸರ್ವಮೂಲ ಸಂದೇಶ

**ವಿಷ್ಣುಸ್ಮೃತಿವಿಹೀನಾ ತು ಪೂಜಾ ಸ್ಯಾದಾಸುರೀ ತಥಾ।**
**ಗೃಹ್ಣಂತಿ ದೇವತಾ ನೈತಾ ತತಃ ಸ್ಯಾದ್ದೇಶವಿಪ್ಲವಃ॥**

ಹರಿಸ್ಮರಣೆ ಇಲ್ಲದ ಪೂಜೆಯು ಆಸುರೀಪೂಜೆ ಎನಿಸುತ್ತದೆ. ಇಂತಹ ಪೂಜೆಯನ್ನು ಯಾವುದೇ ದೇವತೆಗಳೂ ಸ್ವೀಕರಿಸುವುದಿಲ್ಲ. ಭಗವಂತನ ವಿಸ್ಮರಣೆಯಿಂದ ಮಾಡಿದ ಇತರ ದೇವತೆಗಳ ಪೂಜೆಯಿಂದ ಆಧಿ–ವ್ಯಾಧಿ, ಕಳ್ಳಕಾಕರ ಹಾವಳಿ, ಅತಿವೃಷ್ಟಿ–ಅನಾವೃಷ್ಟಿಯಿಂದ ದೇಶ ಕ್ಷೋಭೆಗೊಳಗಾಗುತ್ತದೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ–೭ ಸಂಚಿಕೆ–೧೦ ಸರ್ವಧಾರಿ ಸಂ.॥ ಭಾದ್ರಪದ– ಆಶ್ವಯುಜ ಅಕ್ಟೋಬರ್ ೨೦೦೮

ಸಂಸ್ಥಾಪಕರು:
**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**
ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**E-MAIL**
**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 12 |
| **ಅವಲೋಕನ** | ವಿ॥ ಸಗ್ರಿ ರಾಘವೇಂದ್ರಾಚಾರ್ಯ | 17 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಜೀವನಯಜ್ಞ** | ಶ್ರೀ ಸುನಂದಕೀ | 27 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 30 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 32 |
| **ವಿಷ್ಣುಪುರಾಣ** | ಸ್ಫೂರ್ತಿ | 34 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | 36 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿ॥ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ


| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ವಿಷಯೇಷು ಆವಿಶನ್ ಯೋಗೀ ನಾನಾ ಧರ್ಮೇಷು ಸರ್ವತಃ।**
**ಗುಣದೋಷಾನ್ವಯೇನಾತ್ಮಾ ನ ವಿಷಜ್ಜೇತ ವಾಯುವತ್॥**

ಬೀಸುವ ಗಾಳಿಯಂತೆ ಯೋಗಿಯಾದವನು ಗುಣದೋಷಮಯವಾದ ಭಿನ್ನ ಭಿನ್ನವಾದ ಧರ್ಮಗಳುಳ್ಳ ವೈಷಯಿಕಪದಾರ್ಥಗಳಲ್ಲಿ ಸಂಚರಿಸಿದರೂ ಎಂದೆಂದಿಗೂ ಅದಕ್ಕೆ ಅಂಟಿಕೊಳ್ಳಲಾರ. ಗಾಳಿಯ ಸ್ವಭಾವ ಸದಾ ಸಂಚಾರಶೀಲತೆ. ಅದಕ್ಕೇನೆ ಗಾಳಿಗೆ ಸದಾಗತಿ ಎಂದು ಒಂದು ನಾಮ. ಗಾಳಿಯು ಸದಾಗತಿಯುಳ್ಳದ್ದಷ್ಟೇ ಅಲ್ಲ, ಸರ್ವತ್ರಗವೂ ಹೌದು. ಅಂದರೆ ಎಲ್ಲಡೆಯೂ ತಿರುಗುತ್ತಿರುವಂತಹುದು. ಪ್ರತಿಯೊಂದು ಪದಾರ್ಥವನ್ನು ಸಂಪರ್ಕಿಸಿದರೂ ಮುಟ್ಟಿದರೂ, ಅವಾವ ವಸ್ತುಗಳ ದೋಷವನ್ನು ಅಂಟಿಸಿಕೊಳ್ಳುವುದಿಲ್ಲ. ಇದು ಗಾಳಿಯ ವೈಶಿಷ್ಟ್ಯ. ಗಾಳಿಯು ಸುಂದರವಾದ ಉದ್ಯಾನದಲ್ಲಿ ಯಥೇಚ್ಛವಾಗಿ ವಿಹರಿಸುತ್ತದೆ. ಪ್ರತಿಯೊಂದು ಪುಷ್ಪವನ್ನು ಸಂಪರ್ಕಿಸಿ, ಪುಷ್ಪವನ್ನು ಹಾಗೇನೇ ಬಿಟ್ಟು ಕುಸುಮದ ಸುಗಂಧವನ್ನು ಹೀರಿಕೊಳ್ಳುತ್ತದೆ. ಮಲ-ಮೂತ್ರ ಓಣಿ ಚರಂಡಿಗಳಲ್ಲಿ ತಿರುಗಾಡುತ್ತದೆ. ದುರ್ಗಂಧವನ್ನು ಹೊರುತ್ತದೆ. ಆದರೆ ತಾನು ಮಾತ್ರ ಅದಕ್ಕೆ ಅಂಟುವುದಿಲ್ಲ. ಸುಗಂಧವಿರಲಿ, ಧುರ್ಗಂಧವಿರಲಿ ಯಾವುದೇ ರೀತಿಯ ಗಂಧವನ್ನು ತನಗೆ ಅಂಟಿಸುವುದಿಲ್ಲ. ಆದರೆ ಗಂಧವನ್ನು ನಮ್ಮ ನಿಮ್ಮ ಮೂಗಿಗೆ ಮುಟ್ಟಿಸಿ ನಿರ್ಲಿಪ್ತವಾಗಿಬಿಡುತ್ತದೆ. ಗಾಳಿಯು ಎಲ್ಲೆಡೆಯೂ ಸಂಚರಿಸಿದರೂ, ಎಲ್ಲವನ್ನು ಮುಟ್ಟಿದರೂ ಯಾವುದೇ ರೀತಿಯ ಪರಿಣಾಮಕ್ಕೆ ಒಳಗಾಗುವುದಿಲ್ಲ. ಇದು ಗಾಳಿಯ ವೈಶಿಷ್ಟ್ಯ.

ಯೋಗಿಯೂ ಗಾಳಿಯ ಶಿಷ್ಯನಾದ. ಗಾಳಿಯಿಂದ ಪಾಠ ಕಲಿತ. "ಗುರೋಸ್ತು ಮೌನಂ ವ್ಯಾಖ್ಯಾನಂ" ಗಾಳಿಯ ಮೌನದ ಅಧ್ಯಾಪನ ಯೋಗಿಗೆ ಮನವರಿಕೆಯಾಯ್ತು. ಗಾಳಿಯಂತೆ ಯೋಗಿಯೂ "ಸರ್ವತಃ" ಎಲ್ಲ ಕಡೆ ಸಂಚರಿಸಿದ. "ನ ವಿಷಜ್ಜೇತ" ನಿರ್ಲಿಪ್ತನಾದ. ಕೆಸರಿನಲ್ಲಿ ಕಾಲಿಟ್ಟರೆ ಹೂತುಹೋಗುತ್ತೆ. ಮತ್ತೆ ಮುಂದೆ ಸಾಗುವುದು ಅಸಂಭಾವಿತ. ಭೋಗಿಯ ಪಾಡು ಇದು. ವೈಷಯಿಕ ಪ್ರಪಂಚದಲ್ಲಿಯೇ ಹೆಜ್ಜೆಯಿಟ್ಟ ಭೋಗಿ. ಇಟ್ಟ ಕಾಲನ್ನು ತೆಗೆಯಲಾಗದೆ ಒದ್ದಾಡುವುದರಲ್ಲಿಯೇ ತೃಪ್ತನಾದವ ಈ ಭೋಗಿ. ಯೋಗಿಯು ಮಾತ್ರ ಹಾಗಲ್ಲ, ಕೆಸರಿನಲ್ಲಿ ಗಾಳಿ ಬಂದರೆ ಗಾಳಿಯಲ್ಲಿ ಕೆಸರು ಸೋಂಕದು. ಗಾಳಿಯಂತೆ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಯೋಗಿಯೂ ನಿರ್ವಿಕಾರ. ಯೋಗಿಯು ಎಲ್ಲವನ್ನೂ ನೋಡಿದ. ಯಾವುದರ ಸೆಳೆತವೂ ಆತನಿಗಲ್ಲ. "ಬೇಕು" "ಬೇಕೇ ಬೇಕು" ಎಂಬ ಚಪಲ ಇಲ್ಲವೇ ಇಲ್ಲ. "ಈಸಬೇಕು ಇದ್ದು ಜಯಿಸಬೇಕು" ದಾಸರ ಅನುಭವದ ಇಂತಹ ನುಡಿಗಳು ಸಾಧಕನ ಭವ ಸಾಗರದ ನೌಕಾಯಾನಕ್ಕೆ ದೀಪಸ್ತಂಭ. ಸಾಧಕನು ದೇವರ ಈ ಸೃಷ್ಟಿಯನ್ನು ಅಪೇಕ್ಷಿಸುವವನೂ ಅಲ್ಲ. ಉಪೇಕ್ಷಿಸುವವನೂ ಅಲ್ಲ. ದ್ವೇಷಿಸುವವನೂ ಅಲ್ಲ. ತಟಸ್ಥ. ಒಳ್ಳೆಯತನವನ್ನು ಗ್ರಹಿಸುತ್ತಾನೆ. ಕೆಟ್ಟದ್ದನ್ನು ಗಮನಿಸುತ್ತಾನೆ. ತಾನು ಮಾತ್ರ ಎರಡನ್ನೂ ಮೀರಿರುತ್ತಾನೆ. "ವಿಷಯೇಷು ಆವಿಶನ್" ವೈಷಯಿಕ ಪದಾರ್ಥಗಳನ್ನು ಸೇವಿಸುತ್ತಾನೆ. ಅದರಲ್ಲಿ ಅತ್ಯಾದರ–ಅತ್ಯಾಗ್ರಹರಹಿತನಾದವನೀತ. ನಿಜವಾಗಿಯೂ ಇವುಗಳು "ವಿಷಯಗಳು". ವಿಷಯಗಳು ದುರ್ಬಲನನ್ನು ಕಟ್ಟಿ ಹಾಕುವವುಗಳು. ವಿಷಯ ಎಂಬ ಶಬ್ದಕ್ಕೆ "ಬಂಧಕ" ಎಂದರ್ಥ. "ವಿ" ಎಂಬುದು ಉಪಸರ್ಗ. ಹಾಗಾಗಿ "ವಿ" ಎಂಬ ಶಬ್ದವು ಭಾರಿ, ಭಾರಿ ಬಹಳ ಎಂದರ್ಥವನ್ನು ತಿಳಿಸುತ್ತದೆ. "ಷಿಞ್" ಎಂಬ ಧಾತುವಿಗೆ "ಬಂಧನ" ಎಂದೇ ಅರ್ಥ. ಮೀನು ಹಿಡಿಯುವ ಬೆಸ್ತ ಒಂದು ತುಂಡು ಮಾಂಸವನ್ನು ಕಟ್ಟಿ ನೀರಿಗೆ ಇಳಿಬಿಡುತ್ತಾನೆ. ಹಕ್ಕಿ ಹಿಡಿಯುವ ಬೇಡನು ಅಂಗಳ ತುಂಬ ಅಕ್ಕಿ, ಕಾಳು–ಬೇಳೆ ಚೆಲ್ಲುತ್ತಾನೆ. ಸರ್ಪ ಹಿಡಿಯುವ ವೈದ್ಯನು ಪುಂಗಿ ಊದುತ್ತಾನೆ. ಮೇಲ್ನೋಟಕ್ಕೆ ಎಲ್ಲರೂ ಉಪಕಾರ ಮಾಡುವವರೇ. ಬೆಸ್ತನಾಗಲಿ, ಬೇಡನಾಗಲಿ, ಹಾವಾಡಿಗನಾಗಲಿ, ಮೀನು, ಹಕ್ಕಿ ಹಾವುಗಳಿಗೆ ಭಾರಿ ಉಪಕಾರಿಗಳಂತೆ ಕಾಣಿಸುತ್ತಾರೆ. ಈ ಬಲಿಪಶುಗಳೂ ಹಾಗೇನೇ ಭ್ರಮಿಸುತ್ತವೆ. ಇದನ್ನು ಬಂಧನ ವಿಧಾನವೆನ್ನುತ್ತೇವೆ. ಹೀಗೆ ತತ್ಕಾಲದ ತೃಪ್ತಿಯನ್ನಿತ್ತರೂ ಫಲಿತಾಂಶ ದುಃಖಮಯ. ಎಂದೆಂದೂ ಹೊರಲಾರದ, ಹೊರಬರಲಾಗದ ಜೀವನ. ಅದಕ್ಕೆನ್ನುವುದು ಬಂಧನ. ಈ ವಿಷಯಗಳು ಇದಕ್ಕಿಂತಲೂ ಬಂಧನ. ಕಾಣದಿದ್ದ ಹಗ್ಗಗಳಿಂದ ಈ ವಿಷಯಗಳು ಬಂಧಿಸುತ್ತವೆ. ಕಾಣಲಾಗದ ಗೂಡಿನಲ್ಲೇ ಬಂಧನ. ಬಂಗಾರದ ಪಂಜರ. ಶೂಲ, ಶೂಲವೇ. ಹೊನ್ನಿನದ್ದಾದರೇನು, ಕಬ್ಬಿಣದ್ದಾದರೇನು? ರಕ್ತಪಾತ–ದೇಹಪಾತ ಸಾವು–ನೋವುಗಳು ಅನಿವಾರ್ಯವೇ ತಾನೆ. ವಿಷಯಪದಾರ್ಥಗಳ ಸಂಗದಿಂದಾಗುವ ಸಮಸ್ಯೆಗಳನ್ನು ಕ್ಷಣ–ಕ್ಷಣಗಳಲ್ಲೂ ಅನುಭವಿಸುತ್ತಲೇ ಇದ್ದರೂ ಹೇಯತಾ ಬುದ್ಧಿಯೇ ಬರುವುದಿಲ್ಲ ಅನ್ನುವುದೇ ಆಶ್ಚರ್ಯ. ಗಾಳಕ್ಕೆ ಸಿಕ್ಕಿ ಸಾಯುವ ಮೀನುಗಳನ್ನು ನೋಡುತ್ತಲೇ ಇದ್ದರೂ ಕಣ್ಣಾರೆ ಕಂಡ ಮೀನುಗಳು ಮತ್ತೆ ಮತ್ತೆ ಗಾಳದ ತುದಿಯಲ್ಲಿ ಕಟ್ಟಿದ ಮಾಂಸಕ್ಕೆ ಜೊಲ್ಲು

**(26ನೇ ಪುಟಕ್ಕೆ)**

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

**ವಿದ್ವತ್ ಪ್ರಪಂಚ**



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಭಗವಾನ್ ಶ್ರೀಕೃಷ್ಣನಿಂದ ಸಾಧಕನಾದ ಅರ್ಜುನನನ್ನು ನಿಮಿತ್ತವಾಗಿಟ್ಟುಕೊಂಡು ಉಪದೇಶಿಸಲ್ಪಟ್ಟ ಭಗವದ್ಗೀತೆಯು ವೇದ ಅನಧಿಕಾರಿಗಳಾದ ಸ್ತ್ರೀಯರಿಗೆ ಶೂದ್ರಾದಿಗಳಿಗೆ ಬ್ರಹ್ಮಜ್ಞಾನವನ್ನು ಉಂಟುಮಾಡಿ ಮೋಕ್ಷನೀಡುವುದಕೋಸ್ಕರ ಹೊರಟಿದೆ. ಆದ್ದರಿಂದ ವೇದಾನಧಿಕಾರಿಗಳಾದವರಿಗೆ ಗೀತೆ ಅತಿಮುಖ್ಯವಾದುದು. ಹಾಗೆಯೇ ಈ ಭಗವದ್ಗೀತೆಯು ವೇದದ ಅತಿಗಹನವಾದ ಅರ್ಥವನ್ನು ತಿಳಿಯಲಿಕ್ಕೆ ಸಾಧನವಾಗಿ ವೇದಾಧಿಕಾರಿಗಳಿಗೂ ಮೋಕ್ಷಸಾಧನವಾಗಿದೆ. ಆದ್ದರಿಂದ ಸರ್ವರಿಗೂ ಅತ್ಯುಪಯುಕ್ತವಾದುದು ಈ ಗೀತಾಶಾಸ್ತ್ರ.

ಹದಿನೆಂಟು ಪರ್ವಗಳುಳ್ಳ ಈ ಗೀತೆಯು ವ್ಯಾಸಪ್ರಣೀತ ಶ್ರೀಮಹಾಭಾರತದ ಭೀಷ್ಮಪರ್ವದಲ್ಲಿ ಕೃಷ್ಣಾರ್ಜುನ ಸಂವಾದರೂಪವಾಗಿ ಬಂದಿದೆ. ಮಹಾಭಾರತವು ಸಕಲವೇದಗಳ ಅರ್ಥವನ್ನು ಪ್ರತಿಪಾದಿಸಿ ವೇದಕ್ಕಿಂತಲೂ ಅಧಿಕವಾಗಿ ಪರಮಾತ್ಮನ ಗುಣಗಳನ್ನು ಪ್ರತಿಪಾದನೆ ಮಾಡಿದ್ದರಿಂದ ವೇದಕ್ಕಿಂತಲೂ ಅರ್ಥತಃ ಗಂಭೀರವಾಗಿದೆ. ಅಂತಹ ಮಹಾಭಾರತವೆಂಬ ಪಾರಿಜಾತವೃಕ್ಷದ ಮಧುರೂಪವಾದುದು ಹದಿನೆಂಟು ಅಧ್ಯಾಯಗಳಿಂದ ಕೂಡಿದ ಭಗವದ್ಗೀತೆ.

ಮಹಾಭಾರತದ ಯುದ್ಧಾರಂಭದಲ್ಲಿ ವೇದವ್ಯಾಸದೇವರು ಧೃತರಾಷ್ಟ್ರನನ್ನು ಕುರಿತು ನಿನಗೆ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಡೆಯುವ ಮಹಾಸಂಗ್ರಾಮವನ್ನು ನೋಡಬೇಕೆನ್ನುವ ಇಚ್ಛೆ ಇದೆಯೋ? ಎಂದು ಕೇಳಿದರು. ಅವರ ಮಾತಿಗೆ ಅನುಗುಣವಾಗಿ ಧೃತರಾಷ್ಟ್ರನು ನಾನು ಯುದ್ಧವನ್ನು ಸಾಕ್ಷಾತ್ ಆಗಿ ನೋಡಲಾರೆ. ಯಾಕೆಂದರೆ "ಯುದ್ಧಸ್ಯ ವಾರ್ತಾ ರಮ್ಯಾ" ಯುದ್ಧವನ್ನು ನೋಡುವುದಕ್ಕಿಂತಲೂ ಅದರ ವಿಚಾರ ಕೇಳಲು ಸೊಗಸು ಆದ್ದರಿಂದ ಯುದ್ಧವನ್ನು ನೋಡಿ ಅದರ ವಾರ್ತೆಯನ್ನು ಕೂಲಂಕುಷವಾಗಿ ಹೇಳತಕ್ಕವರು ಬೇಕು ಎಂದು ಪ್ರಾರ್ಥಿಸಿದಾಗ ವೇದವ್ಯಾಸದೇವರು ಸಂಜಯನಿಗೆ ದಿವ್ಯಚಕ್ಷುಸ್ಸನ್ನು ನೀಡಿ ಯುದ್ಧಭೂಮಿಯ ಎಲ್ಲಾ ವಿಚಾರಗಳನ್ನು ಸಂಗ್ರಹಮಾಡಿ, ಅವನ ಮುಖದಿಂದ ಯುದ್ಧದ ವಾರ್ತೆಯನ್ನು ಸುವಿಸ್ತಾರವಾಗಿ ತಿಳಿಯುವುವಂತೆ ಮಾಡಿದರು. ಸಂಜಯನು ಭೀಷ್ಮಪಾತ ಆಗುವ ತನಕ ಕುರುಕ್ಷೇತ್ರದಲ್ಲಿ ನಡೆಯುವ ಪ್ರತಿಯೊಂದು ಘಟನೆಯನ್ನು ಸ್ವತಃ ನೋಡಿ ಧೃತರಾಷ್ಟ್ರನಲ್ಲಿಗೆ ಬಂದು ಭೀಷ್ಮಪಾತದ ಸುದ್ದಿಯನ್ನು ಹೇಳಿದನು. ಈ ಆಘಾತಕರವಾದ

**ಆತನನ್ನು ನಂಬಿ ಕೆಟ್ಟವರಿಲ್ಲ.**

ಸುದ್ದಿಯನ್ನು ಕೇಳಿದ ಧೃತರಾಷ್ಟ್ರನು ಸಂಗ್ರಾಮದ ಆರಂಭದಿಂದ ನಡೆದ ವೃತ್ತಾಂತವನ್ನು ತಿಳಿಸು ಎಂದು ಹೇಳುತ್ತಾನೆ. ಧೃತರಾಷ್ಟ್ರನ ಮಾತಿಗೆ ಅನುಗುಣವಾಗಿ ಯುದ್ಧಾರಂಭದಿಂದ ನಡೆದ ವೃತ್ತಾಂತವನ್ನು ತಿಳಿಸಿ ಪ್ರಾರಂಭದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಮಾಡಿದ ಗೀತೆಯನ್ನು ಧೃತರಾಷ್ಟ್ರನಿಗೆ ಸಂಜಯನು ಹೇಳುತ್ತಾನೆ.

ಮೊದಲ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಗೀತೋಪದೇಶವನ್ನು ಮಾಡಲು ಪ್ರಸಕ್ತಿಯನ್ನು ಹೇಳುತ್ತಾನೆ. ದ್ವಿತೀಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶವನ್ನು ತಿಳಿಸುತ್ತಾನೆ. ಪ್ರಥಮಷಟ್ಕದಲ್ಲಿ ಬ್ರಹ್ಮಜ್ಞಾನ ಸಾಧನವಿಚಾರ. ದ್ವಿತೀಯಷಟ್ಕದಲ್ಲಿ ಪರಮಾತ್ಮನ ಮಾಹಾತ್ಮ್ಯವರ್ಣನೆ. ತೃತೀಯಷಟ್ಕದಲ್ಲಿ ಪ್ರಥಮ–ದ್ವಿತೀಯಷಟ್ಕಗಳ ವಿಸ್ತಾರದ ವಿಷಯವನ್ನು ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ. ಪ್ರಾರಂಭದಲ್ಲಿ ದೃತರಾಷ್ಟ್ರನು ಸಂಜಯನನ್ನು ಕುರಿತು ಪ್ರಶ್ನೆಮಾಡುತ್ತಾನೆ, ಕುರುಕ್ಷೇತ್ರವು ಧರ್ಮಕ್ಷೇತ್ರವಾಗಿದೆ. ಅಲ್ಲಿಗೆ ಹೋದವರಿಗೆ ಧರ್ಮಬುದ್ಧಿಯೇ ಉಂಟಾಗುವುದು. ಅಲ್ಲಿ ಅಧರ್ಮದ ಪ್ರಶ್ನೆಯೇ ಇಲ್ಲ. ಅದ್ದರಿಂದ ಅಧರ್ಮ ಯುದ್ಧವು ನಡೆಯುವ ಪ್ರಮೇಯವೇ ಉದ್ಭವಿಸುವುದಿಲ್ಲ. ಧರ್ಮಯುದ್ಧದಿಂದ ಮಹಾಪರಾಕ್ರಮಿಯಾದ ಭೀಷ್ಮನನ್ನು ಜಯಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ನನ್ನ ಮಕ್ಕಳು ಮತ್ತು ಪಾಂಡವರು ಮಿಳಿತರಾಗಿ ಧರ್ಮಭೂಮಿಯಾದ ಕುರುಕ್ಷೇತ್ರದಲ್ಲಿ ನಡೆಸಿದ ಧರ್ಮಯುದ್ಧದಿಂದ ಭೀಷ್ಮಪಾತವು ಹೇಗೆ ಸಾಧ್ಯವಾಯಿತು? ಅಲ್ಲಿ ನಡೆದ ಯುದ್ಧವು ಧರ್ಮಯುದ್ಧವೋ ಅಥವಾ ಅಧರ್ಮಯುದ್ಧವೋ? ಆದ್ದರಿಂದ ಸಮರಭೂಮಿಯಲ್ಲಿ ಏನು ನಡೆಯಿತು ಎಂಬುದನ್ನು ವಿಸ್ತೃತವಾಗಿ ತಿಳಿಸು ಎಂದು ಹೇಳುತ್ತಾನೆ. ಆಗ ಸಂಜಯನು ಅಲ್ಲಿ ನಡೆದ ವೃತ್ತಾಂತವನ್ನು ತಿಳಿಸುತ್ತಾನೆ.

ಎಲೈ ಧೃತರಾಷ್ಟ್ರನೇ ಕೇಳು! ಆರಂಭದಲ್ಲಿ ನಿನ್ನ ಮಗನಾದ ದುರ್ಯೋಧನನ ಅಭಿಪ್ರಾಯವು ಹೀಗಿತ್ತು. ಯುದ್ಧಕ್ಕೆ ಆಹ್ವಾನಿಸಿದರೆ ಪಂಚಪಾಂಡವರು ಮಾತ್ರ ಯುದ್ಧಕ್ಕೆ ಬರಬಹುದು. ಅವರಿಗೆ ಸಹಾಯಕರು ಯಾರೂ ಇಲ್ಲ. ಸೈನ್ಯವೂ ಇಲ್ಲ. ಬೇಕಾದ ಕೋಶ–ಸಂಪತ್ತುಗಳೂ ಇಲ್ಲ. ಆದ್ದರಿಂದ ಅಂತಹ ಪಾಂಡವರನ್ನು ಸುಲಭವಾಗಿ ಜಯಿಸಬಹುದು ಎಂದು ಯೋಚಿಸಿ ಯುದ್ಧಾಹ್ವಾನವನ್ನು ನೀಡಿದನು. ಆದರೆ ಯುದ್ಧಕ್ಕಾಗಿ ಕುರುಕ್ಷೇತ್ರಕ್ಕೆ ಬಂದ ಪಾಂಡವರ ಏಳು ಅಕ್ಷೋಹಿಣಿ ಸಂಖ್ಯೆಯಿಂದ ಕೂಡಿದ ಸೈನ್ಯವನ್ನು ಕಂಡು ಭೀತನಾದ ದುರ್ಯೋಧನನು ತಮ್ಮ ಆಚಾರ್ಯರಾದ ದ್ರೋಣರ ಸಮೀಪ ಹೋಗಿ ಈ ಮಾತನ್ನು ತಿಳಿಸುತ್ತಾನೆ.

(ಮುಂದುವರಿಯುವುದು)

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಪ್ರವಚನ ಮಾಲಿಕೆ

ಭಾಗ–7

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ವೇದವ್ಯಾಸ ದೇವರು ಒಂದು ಮಾತು ಅಂದಿದ್ದಾರೆ

**ದ್ವಾವಂಭಸಿ ನಿವೇಷ್ಟವ್ಯೌ ಗಲೇ ಬಧ್ವಾ ದೃಢಾಂಶಿಲಾಂ**

**ಧನವಂತಮದಾತಾರಂ ದರಿದ್ರಂ ಚಾತಪಸ್ವಿನಂ**

ಇಬ್ಬರನ್ನು ನೀರಿಗೆ ಹಾಕಬೇಕಂತೆ. ಒಬ್ಬನಲ್ಲಿ ತುಂಬಾ ಸಂಪತ್ತಿದ್ದರೂ ದಾನ ಮಾಡುವವನಲ್ಲ. ಸಂಪತ್ತಿನ ರಾಶಿ ಇದ್ದರೂ ಇನ್ನೊಬ್ಬರಿಗೆ ಕೈಯಾರೆ ಎತ್ತಿ ಕೊಡುವವನಲ್ಲ. ದಾನ ಧರ್ಮದ ಬುದ್ಧಿ ಅವನಲ್ಲಿಲ್ಲ. ದಾನ ಎಂದರೇನು? ಧರ್ಮ ಎಂದರೇನು? ಯೋಗ್ಯ ವ್ಯಕ್ತಿಯನ್ನು ಕರೆತಂದು ಮಣೆಹಾಕಿ, ಕೂಡಿಸಿ, ಉಪಚಾರ ಮಾಡಿ ದಕ್ಷಿಣೆ ಸಹಿತ ಕೊಡತಕ್ಕಂತಹ ವಸ್ತುವಿಗೆ 'ದಾನ' ಎಂದು ಹೆಸರು. ಯಾರೋ ಅಯೋಗ್ಯ ಮನೆಯ ಮುಂದೆ ನಿಂತಿದ್ದಾನೆ, ಅವನಿಗೆ ಏನಾದರು ಕೊಟ್ಟು ಕಳಿಸುವುದನ್ನು 'ಧರ್ಮ' ಎಂದು ಕರೆದರು. ನಮ್ಮ ಜೀವನದಲ್ಲಿ ನಾವು ಧರ್ಮಾಚರಣೆ ಮಾಡಬೇಕು. ನಾವು ಧಾರ್ಮಿಕರೂ, ದಾನಿಗಳೂ ಆಗಬೇಕು. ಆದ್ದರಿಂದಲೇ ಆನಂದತೀರ್ಥರು ಎಚ್ಚರಿಕೆ ಕೊಟ್ಟರು. **'ನಾನಾ ಜನಸ್ಯ ಶುಶ್ರೂಷಾ'** ಎಂದರು. ನಾನಾ ರೀತಿಯ ಜನರನ್ನು ಶುಶ್ರೂಷೆ ಮಾಡಬೇಕು. ಧರ್ಮದ ಮೂಲಕ ಅಯೋಗ್ಯರನ್ನು, ದಾನದ ಮೂಲಕ ಯೋಗ್ಯರನ್ನು ಶುಶ್ರೂಷೆ ಮಾಡಿ ತಾನು ಜೀವನದಲ್ಲಿ ದಾನಿ, ಧರ್ಮಿ ಆಗಬೇಕು. ಆದ್ದರಿಂದ **'ಧನವಂತಂ ಅದಾತಾರಂ'** ತುಂಬಾ ಸಂಪತ್ತು ಇದ್ದುಕೊಂಡು ಒಂದು ಕಾಸು ಕೈಯತ್ತಿ ಕೊಡದವನನ್ನು ನೀರಿಗೆ ಹಾಕಬೇಕೆಂದರು.

ಇನ್ನೊಬ್ಬ **'ದರಿದ್ರಂಚ ಅತಪಸ್ವಿನಮ್ಃ'** ಮನೆಯಲ್ಲಿ ದುಡ್ಡಿಲ್ಲ. ಆದರೆ ಮನಸ್ಸಿನಲ್ಲಿ ತುಂಬಾ ಆಸೆ ತುಂಬಿಸಿಕೊಂಡಿರುತ್ತಾನೆ. ಅಂಥವರು ಮನಸ್ಸಿನಲ್ಲಿ ಗಾಳಿಗೋಪುರ ಕಟ್ಟದೆ ಸ್ವಲ್ಪ ಜಪ ಮಾಡಿಕೊಂಡು ತನಗೆ ಶ್ರೇಯಸ್ಸನ್ನು ತಂದು ಕೊಳ್ಳಬೇಕೆಂದು ವೇದವ್ಯಾಸ ದೇವರು ಹೇಳುತ್ತಾರೆ. ದರಿದ್ರನು ಜಪ ಮಾಡಿಕೊಂಡಿರಬೇಕು. ಧನವುಳ್ಳವನು ದಾನ ಮಾಡಿಕೊಂಡಿರಬೇಕು. ಅಣ್ಣ, ಹಾಗೆ ಮಾಡದಿದ್ದಲ್ಲಿ ಅಂತವರನ್ನು ನೀರಿಗೆ ಹಾಕಬೇಕೆಂದು ವ್ಯಾಸರು ಹೇಳಿದ್ದಾರೆಂದು ವಿದುರನು ಎಚ್ಚರಿಕೆ ಕೊಡುತ್ತಾನೆ. ತುಂಬಾ ಸಂಪತ್ತನ್ನು ಕೂಡಿ ಹಾಕಿಕೊಂಡು, ಸ್ವಲ್ಪವನ್ನೂ ಪಾಂಡವರಿಗೆ ಕೈ ಎತ್ತಿ ಕೊಡದ ತನ್ನನ್ನು ಉದ್ದೇಶಿಸಿ ಹೇಳಿದನ್ನು

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಧೃತರಾಷ್ಟ್ರ ತಿಳಿದು, ತನಗೆ ಈಜು ಬರುತ್ತದೆ ಎಂದು ವಿದುರನನ್ನು ಟೀಕಿಸಿದನು. ಅದಕ್ಕೆ ವಿದುರನು 'ಈ ಬುದ್ಧಿವಂತಿಗೆಗಿಂತ ಹೆಚ್ಚಿನ ಬುದ್ಧಿ ನನ್ನ ಅಪ್ಪ ವ್ಯಾಸರದ್ದು. ಏಕೆಂದರೆ ಅವರು ನೀರಿಗೆ ಮಾತ್ರ ಹಾಕು ಎನ್ನದೆ **'ಗಲೇ ಬುಧ್ವಾ ದೃಢಾಂಶಿಲಾಂ'** ದೊಡ್ಡ ಕಲ್ಲನ್ನು ಕುತ್ತಿಗೆಗೆ ಕಟ್ಟಿ ನೀರಿಗೆ ಹಾಕಬೇಕೆಂದಿದ್ದಾರೆ' ಎಂದು ಹೇಳಿದನು. ಪಾಪಿಗಳನ್ನು ನಾವು ನಮಗೆ ಬೇಡವೆಂದು ನೀರಿಗೆ ಹಾಕಿದರೆ ಅವರು ನೀರಿನಿಂದ ಬದುಕಿಕೊಂಡು ಬರುತ್ತಾರೆ. ಪಾಪಿಗಳು ತನಗೂ ಬೇಡವೆಂದು ನೀರು ಕೂಡ ಅವರನ್ನು ಬಿಟ್ಟು ಬಿಡುತ್ತದಂತೆ. ನಮ್ಮಲ್ಲಿ ಒಂದು ಮಾತಿನ ಪ್ರಕಾರ **'ಪಾಪೀ ಚಿರಾಯುಃ, ಸುಕೃತೀ ಗತಾಯುಃ'** ಪುಣ್ಯವಂತರಿಗೆ ಸ್ವಲ್ಪನೇ ಆಯುಷ್ಯವಂತೆ. ಪಾಪಿಗಳಿಗೆ ಬಾರಿ ಆಯುಷ್ಯವಂತೆ. ಅಣ್ಣ, ನಿನ್ನಂತಹ ಪಾಪಿಗಳನ್ನು ನೀರೂ ತೆಗೆದುಕೊಳ್ಳದೆ ಇರುವಾಗ ಕುತ್ತಿಗೆಗೆ ದೊಡ್ಡ ಕಲ್ಲನ್ನು ಕಟ್ಟಿ ನೀರಿಗೆ ಹಾಕಬೇಕು, ಎಂದು ವ್ಯಾಸರು ಹೇಳಿದ್ದಾರೆ. ಆದ್ದರಿಂದ ಇದ್ದಂತಹ ಸಂಪತ್ತಿನಿಂದ ಸ್ವಲ್ಪ ಪಾಂಡವರಿಗೆ ದಾನ ಮಾಡು ಎಂದು ವಿದುರನು ಹೇಳುತ್ತಾನೆ.

ಚತುರ್ಮುಖ ಬ್ರಹ್ಮನು ದೇವತೆ, ದೈತ್ಯ ಮತ್ತು ಮಾನವರನ್ನು ಕರೆದು ಮೂವರಿಗೆ 'ದ' ಎಂದು ಉಪದೇಶ ಕೊಟ್ಟನು. ದೈತ್ಯರಿಗೆ 'ದ' ಅಂದರೆ 'ದಯೆ' ಎಂದ. ಪ್ರಾಣಿಗಳ ಮೇಲೆ ಹಿಂಸೆ ಮಾಡದೆ ದಯೆ ತೋರಿಸಿ ಎಂದು ಉಪದೇಶಿಸಿದ. ದೇವತೆಗಳಿಗೆ ಇಂದ್ರಿಯ ದಮನ ಮಾಡಿಕೊಳ್ಳಲು ಉಪದೇಶಿಸಿದನು. ತುಂಬಾ ಸಂಪತ್ತು, ಅಪ್ಸರಸ್ತ್ರೀಯರು, ಭೋಗ ಭಾಗ್ಯಗಳು ಮನೆಯಲ್ಲಿ ಇದೆಯೆಂದು ಉಪಯೋಗಿಸಿಕೊಳ್ಳದೆ, ಸ್ವಲ್ಪ ದಮನ ಮಾಡಿ ಕೊಳ್ಳುವಂತೆ ಹೇಳಿದನು. ಇನ್ನು ಮಾನವನಿಗೆ ಸ್ವಲ್ಪ ದಾನ ಮಾಡಲು ಉಪದೇಶಿಸಿದ. ಮನೆಯಲ್ಲಿ ಕೂಡಿ ಹಾಕಿಟ್ಟಂತಹ ಸಂಪತ್ತು ಬೇಕಾದಷ್ಟು ಇದೆ. ಅದನ್ನು ಸ್ವಲ್ಪ ದಾನ ಮಾಡು ಎಂದ. ನಮ್ಮ ದಾನದ ಬಗ್ಗೆ ಒಂದು ಉದಾಹರಣೆ ಕೊಡುವುದಾದರೆ ಒಬ್ಬನು ಒಳ್ಳೆಯ ಪಂಡಿತನನ್ನು ಮನೆಗೆ ಕರೆದು ಅವನಿಗೆ ನೂರು ರೂಪಾಯಿ ಸಂಭಾವನೆ ಕೊಡಲು ಆಲೋಚಿಸುತ್ತಾನೆ. ಅಷ್ಟರಲ್ಲಿ ಅಕ್ಕಪಕ್ಕದವರ ಮನೆಯಲ್ಲೂ ಆ ಪಂಡಿತನನ್ನೇ ಕರೆದಿದ್ದಾರೆ ಎಂದು ತಿಳಿದಾಗ ಅವನಿಗೆ ಐವತ್ತು ರೂಪಾಯಿಗಳನ್ನು ಕೊಟ್ಟರೆ ಸಾಕು ಎಂದು ಎಣಿಸುತ್ತಾನೆ. ಮಾರನೆಯ ದಿನ ಪಂಡಿತನು ಮಣೆಯಲ್ಲಿ ಕುಳಿತಿದ್ದರೆ ಇವನ ಕೈಯಲ್ಲಿ ಬಂದದ್ದು ಐದೇ ರೂಪಾಯಿ. ಐದು ರೂಪಾಯಿ ಕೊಟ್ಟು ಕೃಷ್ಣಾರ್ಪಣ ಅಂದು ಬಿಟ್ಟ. ಆ ಪಂಡಿತನ ತೊಂಬತ್ತೈದು ರೂಪಾಯಿಯ ಋಣ ಇಟ್ಟುಕೊಂಡನಂತೆ. ಆ ಋಣತೀರಿಸಿಕೊಳ್ಳಲು ಪುನಃ ಹುಟ್ಟಬೇಕಾಯಿತು. ಸಂಕಲ್ಪ ಮಾಡಿದವನು ನಾಳೆಗೆ ಇಟ್ಟರೆ ಕಠಿಣ ಎಂದರು. ಆದ್ದರಿಂದ

**(8ನೇ ಪುಟಕ್ಕೆ....)**

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಸ್ವರ ಎಂದರೆ ಸ್ವತಂತ್ರವಾಗಿ ರಾಜಿಸುವಂಥವುಗಳು. ಸ್ವರಗಳೊಂದಿಗೆ ಸೇರಿ ವ್ಯಕ್ತವಾಗುವಂಥವುಗಳನ್ನು ವ್ಯಂಜನಗಳು ಎನ್ನುತ್ತಾರೆ. ಇವುಗಳು ಸ್ವರಗಳಂತೆ ಸ್ವಯಮೇವ ರಾರಾಜಿಸುವುದಿಲ್ಲ. ವ್ಯಕ್ತವಾಗಬೇಕಾದರೆ ಸ್ವರದೊಡನೆ ಸೇರಲೇಬೇಕಾಗುತ್ತದೆ. ಯ ಕಾರ ದಿಂದ ಕ್ಷ ಕಾರದವರೆಗೆ ಇರುವ ಶಬ್ದಗಳನ್ನು ವ್ಯಾಪಕಗಳೆನ್ನುತ್ತಾರೆ. ಒಟ್ಟು ಅ ಕಾರದಿಂದ ಕ್ಷ ಕಾರದವರೆಗೆ ಅಕ್ಷರಗಳು ಐವತ್ತೊಂದು. 16+25+10=51.

ವರ್ಗದ ಮೂರು ಪ್ರಭೇದಗಳಿಗೆ ಮೂರು ದೇವತೆಗಳನ್ನು ಹೇಳಿದ್ದಾರೆ. ಸೋಮ, ಸೂರ್ಯ, ಅಗ್ನಿ. ಈ ದೇವತೆಗಳು ಈ ವರ್ಗಗಳನ್ನು ನಿಯಂತ್ರಿಸುತ್ತಿವೆ. ಬಿಂದು ಎನ್ನುವುದು ಪುರುಷ ವರ್ಗವನ್ನು ಸೂಚಿಸಿದರೆ ವಿಸರ್ಗ ಸ್ತ್ರೀವರ್ಗವನ್ನು ಸೂಚಿಸುತ್ತದೆ. ಕ್ಷ ಅಕ್ಷರದ ದೇವತೆ ನರಸಿಂಹ. ಈ ವರ್ಗಗಳಿಂದ ಏನು ಪ್ರಯೋಜನ. ಈ ಮೂರು ವರ್ಗಗಳಿಂದ ಕಾಮ, ಧನ, ಧರ್ಮ ಫಲಗಳು ಉಂಟಾಗುತ್ತವೆ. ಸ್ವರವನ್ನು ಸರಿಯಾಗಿ ತಿಳಿದುಕೊಂಡು ಉಚ್ಚರಿಸುವುದರಿಂದ ಅವು ನಮ್ಮ ಕಾಮನೆಗಳನ್ನು ಪೂರ್ತಿಗೊಳಿಸುತ್ತದೆ. ಸ್ವರದಿಂದ ನಮ್ಮ ಭಾವನೆಗಳನ್ನು express ಮಾಡಬಹುದು. ಅಳುವದು, ನಗುವುದು, ಆಶ್ಚರ್ಯ ಸೂಚಿಸುವುದು ಇತ್ಯಾದಿ ಎಲ್ಲ ಸ್ವರದಿಂದ ಉಂಟಾಗುತ್ತದೆ. ಸ್ಪರ್ಷಗಳಿಂದ ಧನ ಸಂಪಾದನೆಯಾಗುತ್ತದೆ. ಧನ ಸಂಪಾದನೆಗೆ ಸ್ಪರ್ಷಗಳು ಬಹಳ ಸಹಾಯ ಮಾಡುತ್ತವೆ. ವ್ಯಾಪಕಗಳಿಂದ ನಮ್ಮ ಧರ್ಮವೃದ್ಧಿಹೊಂದುತ್ತದೆ.

ಪಂಚಭೂತಗಳಲ್ಲಿ ಈ ಎಲ್ಲಾ ಅಕ್ಷರಗಳು ಸೇರಿಕೊಂಡಿವೆ. ಅ, ಆ, ಇ, ಈ, ಉ ಇವು ಕ್ರಮವಾಗಿ ವಾಯು,ಅಗ್ನಿ, ಭೂಮಿ, ಜಲ, ಹಾಗೂ ಆಕಾಶಗಳನ್ನು ಸೂಚಿಸುತ್ತವೆ. ಪಂಚವರ್ಗಗಳು ಸಹ ಈ ಪಂಚಭೂತಗಳನ್ನೇ ಸೂಚಿಸುತ್ತದೆ. ಯರಲವಶಷ-ಅಗ್ನಿ ಅಧಿಪತಿಯಾದರೆ 'ಕ್ಷ'ಗೆ ವಾಯು, 'ಳ'ಗೆ ಭೂಮಿ, 'ಸ' ಗೆ ನೀರು ಹಾಗೂ 'ಹ' ಗೆ ಆಕಾಶವನ್ನು ಸೂಚಿಸುತ್ತವೆ. ಇಪ್ಪತ್ತೈದು ಸ್ಪರ್ಷಗಳು ಏಕೆ? ಈ ಇಪ್ಪತ್ತೈದು ಸ್ಪರ್ಷಗಳೇ ಇಪ್ಪತ್ತೈದು ತತ್ವಗಳು. ಪ್ರಕೃತಿ ಮಹತ್, ಅಹಂಕಾರ....... ಇವು ಎಂಟು. ಪಂಚಭೂತಗಳು,

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು ಹಾಗೂ ಮನಸ್ಸು. 5+5+5+1=16+8=24 ಭಗವಂತ ಇಪ್ಪತ್ತೈದನೇ ತತ್ವ. ಮಕಾರ ಪುರುಷನನ್ನು ಹೇಳುತ್ತದೆ. ಆದ್ದರಿಂದ ಓಂಕಾರದಲ್ಲಿ ಸೇರಿದೆ.

ವರ್ಣಗಳನ್ನು ಏಕೆ ಹೇಳಿದರು? ಅವು ನಿಜವಾಗಿ ಮೂಲಮಂತ್ರಗಳು. ಇವುಗಳನ್ನು ಮಾತೃಕೆಗಳೆಂದು ಹೇಳುತ್ತಾರೆ. ಅಂದರೆ ಮಾತೃ ಸ್ಥಾನದಲ್ಲಿ ಇರುವಂಥಹವುಗಳು. ನಮಗೆ ತಾಯಿಯಂತೆ ಇರುವಂಥಹದ್ದು. ಈ ಮಾತೃಕೆಗಳು ಓಂಕಾರದಿಂದ ಹುಟ್ಟಿದ್ದು. ಓಂಕಾರವು ಎಂಟು ಕಲೆಗಳಿಂದ ಕೂಡಿದೆ. ಅ, ಉ, ಮ, ನಾದ, ಬಿಂದು, ಕಲೆ, ಶಾಂತ, ಅತಿಶಾಂತ ಈ ಕಲೆಗಳಿಂದಲೇ ಈಗಿರುವ ಅಕ್ಷರಗಳು ಉತ್ಪತ್ತಿಯಾದವು. ಓಂಕಾರದ ಅಕಾರದಿಂದ ಸ್ವರಗಳು (ಅ, ಇ, ಉ, ಋ, ಲ್...), ಓಂಕಾರದ ಉಕಾರದಿಂದ 'ಕ' ವರ್ಗ, ಮಕಾರದಿಂದ 'ಚ'ವರ್ಗ, ನಾದದಿಂದ 'ಟ'ವರ್ಗ, ಬಿಂದುವಿನಿಂದ 'ತ'ವರ್ಗ, ಕಲೆಯಿಂದ 'ಪ'ವರ್ಗ, ಶಾಂತದಿಂದ ಯ–ರ–ಲ–ವ, ಹಾಗೂ ಅತಿಶಾಂತದಿಂದ ಶ–ಷ–ಸ–ಹಗಳು ಹುಟ್ಟಿದವು. ಓಂಕಾರದಿಂದಲೇ ಬೆಳೆದು ಬಂದ ಮಹಾಮಂತ್ರಗಳು ಭೂಃ ಭುವಃ ಸುವಃ. ಈ ಎಂಟು ಆವೃತ್ತಿಗಳೇ ಗಾಯತ್ರಿಯ ಮೂರು ಪಾದಗಳನ್ನು ಹೇಳುತ್ತವೆ. ಇವೇ ಗಾಯತ್ರಿಯ ಬೀಜಾಕ್ಷರಗಳು. ಈ ಮೂರು ಪಾದಗಳೇ ಪುರುಷಸೂಕ್ತದ ಮೂರು ವರ್ಗಗಳು. ಪುರುಷಸೂಕ್ತದ ಮೂರು ವರ್ಗಗಳೇ ಮೂರು ಅಖಂಡ ವೇದಗಳು. ಹೀಗೆ ಓಂಕಾರವೇ ಸಮಸ್ತ ವರ್ಣಗಳಿಗೂ ಹಾಗೂ ಸಮಸ್ತ ವೇದಕ್ಕೂ ಉಗಮ ಸ್ಥಾನವಾಗಿದೆ. ಈ ಅಕ್ಷರಗಳನ್ನು ತಿಳಿದುಕೊಂಡು ಏನು ಪ್ರಯೋಜನ? ಈ ಎಲ್ಲಾ ಅಕ್ಷರಗಳಿಗೂ ದೇವತಾಸ್ವರೂಪ ಇವೆ. 51 ಅಕ್ಷರಗಳಿಗೆ 51 ದೇವತೆಗಳಿದ್ದಾರೆ.

**(ಮುಂದುವರಿಯುತ್ತದೆ)**

**(6ನೇ ಪುಟದಿಂದ)**

ಧೃತರಾಷ್ಟ್ರನೇ, ಯಾವುದನ್ನು ಯಾವಾಗ ಮಾಡಬೇಕೆಂದು ಸಂಕಲ್ಪ ಮಾಡುತ್ತೇವೋ, ಅದನ್ನು ಇಂದಿನ ದಿನ ಸುದಿನವೆಂದು ಆ ಕ್ಷಣದಲ್ಲೇ ಮಾಡಿಬಿಡಬೇಕು. ಈ ದೃಷ್ಟಿಯಿಂದಲೇ ಇಂದಿನ ವಾರ ಶುಭವಾರ, ಇಂದಿನ ಯೋಗ ಶುಭಯೋಗ, ಇಂದಿನ ಕರಣ ಶುಭಕರಣ, ಇಂದಿನ ಲಗ್ನ ಶುಭ ಲಗ್ನ ಎಂದು ದಾಸರು ಎಚ್ಚರಿಕೆ ಕೊಟ್ಟಿರುವುದು. ಆದುದರಿಂದ 'ಧೃತರಾಷ್ಟ್ರ ಇಂದೇ ಮಾಡು ದಾನ' ಎಂದು ವಿದುರನು ಹೇಳುತ್ತಾನೆ.

**(ಸಶೇಷ)**

**ಪ್ರತಿದಿನ ಆತನನ್ನು ಪೂಜಿಸಬೇಕು**

# ಶ್ರೀಹರಿಭಕ್ತಿಸಾರ

–ವಿ॥ ಹಯವದನ ಪುರಾಣಿಕ, ತಿರುಪತಿ

**ಹಲವು ಕರ್ಮಗಳಿಂದ ಮೂತ್ರದ**
**ಬಿಲಗಳಲಿ ಸಂಚರಿಸಿ ಪದವಿಯ**
**ಫಲವ ಕಾಣದೆ ಹೊಲಬುದಪ್ಪಿದೆನೆನ್ನ ದೇಹದಲಿ ।**
**ಒಲಿದು ನೀನಿರೆ ನಿನ್ನ ಸಲುಗೆಯ**
**ಬಲುಮೆಯಲಿ ಬರಸೆಳೆವೆ ಮುಕುತಿಯ**
**ಲಲನೆಯನೆ ತಳುವಿಲ್ಲ ರಕ್ಷಿಸು ನಮ್ಮನನವರತ ॥೩೯॥**

ನಾನು ಪೂರ್ವಜನ್ಮದಲ್ಲಿ ಮಾಡಿದ ಹಲವು ಕರ್ಮಗಳಿಂದ ಮೂತ್ರದ ಬಿಲಗಳಲ್ಲಿ ಸಂಚರಿಸಿ ಹುಟ್ಟಿದ್ದೇನೆ. ಈ ದಾರಿಯಲ್ಲಿ ಸಂಚರಿಸುವುದರ ನಿಜವಾದ ಫಲವನ್ನು ತಿಳಿಯದೆ ದಾರಿತಪ್ಪಿದೆ. ಆದರೂ ನನ್ನ ದೇಹದಲ್ಲಿ ಒಲಿದು ನೀನಿರುವಾಗ ಏಕೆ ಚಿಂತೆ? ನಿನ್ನ ಸಲುಗೆಯ ಬಲದಿಂದ ಮುಕ್ತಿ ಲಲನೆಯನ್ನು ಬರಸೆಳೆಯುತ್ತೇನೆ. ಇದಕ್ಕೆ ತಡವಿಲ್ಲ. ಅದಕ್ಕೆ ನಮ್ಮನ್ನು ನೀನು ಸದಾ ರಕ್ಷಿಸಬೇಕು.

## ಹಲವು ಕರ್ಮಗಳಿಂದ ಮೂತ್ರದ ಬಿಲದಿ ಸಂಚರಿಸಿ

ಪೂರ್ವಕರ್ಮವಶದಿಂದ ತಾಯಿಯ ಗರ್ಭದಲ್ಲಿ ಜನಿಸುವವನು ಮೊದಲಿಗೆ ತಂದೆಯ ಉದರದಲ್ಲಿ ವೀರ್ಯದಲ್ಲಿದ್ದು ಮೂತ್ರದ್ವಾರದಿಂದ ಹೊರಗೆ ಬಂದು ತಾಯಿಯ ಉದರವನ್ನು ಸೇರಬೇಕಾಗುತ್ತದೆ.

**'ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಭಿಜಾಯತೇ'** ಎಂದು ಭಗವದ್ಗೀತೆ ಹೇಳುವಂತೆ ಹಿಂದಿನ ಜನ್ಮದಲ್ಲಿ ಪುಣ್ಯಮಾಡಿದವನು ಮೈಮನಗಳಲ್ಲೆಲ್ಲ ಭಗವಂತನನ್ನು ತುಂಬಿಕೊಂಡು ಶುಚಿಯಾಗಿ ಪವಿತ್ರರಾಗಿರುವ ಶ್ರೀಮಂತರ ಮನೆಯಲ್ಲಿ ಹುಟ್ಟುತ್ತಾರೆ. ಗೋಮೂತ್ರದಂತೆ ಪವಿತ್ರವಾದ ಮೂತ್ರದ ಬಿಲದಲ್ಲಿ ಸಂಚರಿಸಿ ಬಂದು ತಾಯಿಯ ಉದರದಲ್ಲಿ ಜನ್ಮ ತಳೆಯುತ್ತಾರೆ. ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯ ಕರ್ಮಗಳನ್ನು ತಿರುಗಿ ಮುಂದುವರಿಸುತ್ತಾರೆ. ಮುಂದೆ ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳುತ್ತಾರೆ.

ಹಿಂದಿನ ಜನ್ಮದಲ್ಲಿ ಪಾಪ ಮಾಡಿದವರು ಅಶುಚಿಯಾದ ಪಾಪಿಗಳ ಅಪವಿತ್ರವಾದ ಮೂತ್ರದ ಬಿಲದಲ್ಲಿ ಸಂಚರಿಸಿ ದರಿದ್ರರಾಗಿ ರೋಗಿಗಳಾಗಿ ಬಲಹೀನರಾಗಿ ಜನಿಸಿ

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

ಹೊಟ್ಟೆಪಾಡಿಗಾಗಿ ತಿರುಗಿ ಹಿಂದಿನ ಅಪವಿತ್ರ ಪಾಪಕರ್ಮಗಳನ್ನೇ ಮುಂದುವರಿಸುತ್ತಾರೆ. ಪವಿತ್ರವಾದ ಪುಣ್ಯಕರ್ಮ ಮಾಡಲು ಅವರಿಗೆ ಶಕ್ತಿಯಿಲ್ಲ, ಪುರುಸೊತ್ತು ಇರುವುದಿಲ್ಲ.

**'ಕ್ಷುಧಿತಾನಾಂ ದುರ್ಭಗಾನಾಂ ಕುತೋ ಯೋಗ ಸಮಾಧಯಃ ।'**

ಎಂದು ಪದ್ಮಪುರಾಣ ಹೇಳುವಂತೆ ಹಸಿದ ದರಿದ್ರ ಮಾನವರು ಏನು ಯೋಗಾಭ್ಯಾಸ ಮಾಡಬಲ್ಲರು? ಪಾಪವನ್ನೇ ಮಾಡಿ ತಿರುಗಿ ದರಿದ್ರರಾಗಿಯೇ ಜನಿಸುತ್ತಾರೆ. ಇದಕ್ಕೆ ಕೊನೆಯೇ ಇಲ್ಲ.

## ಪದವಿಯ ಫಲವ ಕಾಣದೆ ಹೊಲಬುದಪ್ಪಿದೆನು

ಪದವಿ ಎಂದರೆ ದಾರಿ. ಮೂತ್ರದ ಬಿಲಗಳ ದಾರಿಯಲ್ಲಿ ಸಂಚರಿಸುವುದು ಹುಟ್ಟುವ ಮಾನವನಿಗೆ ತಪ್ಪಿದ್ದಲ್ಲ. ಆದರೆ ಈ ಸಂಚಾರದ ಫಲವೇನು ಎಂಬುದನ್ನು ತಿಳಿಯಬೇಕು. ತಿಳಿದು ವಿರಕ್ತನಾಗಿ ಹರಿದಾಸನಾಗಬೇಕು, ಹರಿಭಜನೆ ಮಾಡಬೇಕು. ಇದೇ ನಿಜವಾದ ಫಲ. ಅದನ್ನು ಅಜ್ಞ ಮಾನವ ಕಾಣದೆ ಹೊಲಬು ತಪ್ಪುತ್ತಾನೆ. ದಾರಿ ತಪ್ಪುತ್ತಾನೆ. ಶರೀರ ಪಡೆದ ಮೇಲೆ ಆ ಶರೀರವನ್ನೇ ತನ್ನ ಸರ್ವಸ್ವವೆಂದು ಅದು ನೀಡುವ ಆಹಾರ ನಿದ್ರೆ ಮೈಥುನ ಸುಖಗಳೇ ಪರಮಸುಖವೆಂದು ಅವನ್ನು ಉಣ್ಣುವುದೇ ನಿಜವಾದ ಫಲವೆಂದು ತಪ್ಪಾಗಿ ತಿಳಿಯುತ್ತಾನೆ. ನಿಜವಾದ ಫಲವನ್ನು ಕಾಣದೆ **'ಭುಂಜತೇ ತೇ ತ್ವಘಂ ಪಾಪಾಃ'** ಎಂದು ಭಗವದ್ಗೀತೆ ಹೇಳುವಂತೆ ಶರೀರ ಸುಖಕ್ಕಾಗಿ ಪುನಃ ಪಾಪವನ್ನೇ ಮಾಡಿ ಉಣ್ಣುತ್ತಾನೆ. ಅವನು ಉಣ್ಣುವ ಅನ್ನದ ಅಗಳು ಒಂದೊಂದೂ ಪಾಪಮಯವಾಗಿರುತ್ತದೆ. ದಾಸರು ತಾನು ಹೀಗೆ ಮಾಡಿದೆನೆನ್ನುವುದು ಅವರ ವಿನಯಗುಣ. ದೊಡ್ಡವರು ವಿನಯದಿಂದ ದೊಡ್ಡವರಾಗುತ್ತಾರೆ. ಸಣ್ಣವರು ಅವಿನಯದಿಂದ ಸಣ್ಣವರಾಗುತ್ತಾರೆ.

## ಎನ್ನದೇಹದಲಿ ಒಲಿದು ನೀನಿರೆ

ಶ್ರೀಹರಿ, ನೀನೊಲಿದು ನನ್ನ ದೇಹದಲ್ಲಿ ಇರುತ್ತಿ. ಉಣಲು ಬಾರದ ನನಗೆ ಉಣಲು ಕಲಿಸುತ್ತಿ. ನೀನು ಬಿಂಬ ನಾನು ಪ್ರತಿಬಿಂಬ. ನಿಲುಗನ್ನಡಿಯ ಮುಂದೆ ನಿಂತು ನಾನು ಚೇಷ್ಟೆ ಮಾಡಿದರೆ ನನ್ನ ಪ್ರತಿಬಿಂಬ ಚೇಷ್ಟೆ ಮಾಡುತ್ತದೆ. ಹಾಗೇ ನೀನು ಉಂಡರೆ ನಾನುಣುವೆ. ನಲಿದು ನಿನ್ನನೆ ಭಜನೆ ಮಾಡಿದರೆ ನಾನು ನಿನ್ನನ್ನು ಭಜಿಸುವೆನು. **'ಮಹಾಮರ್ಕಂ ಮಘವನ್ ಚಿತ್ರಮರ್ಚ'** ಎಂದು ವೇದವಾಣಿ ಇದನ್ನು ನನಗೆ ಬೋಧಿಸುತ್ತದೆ.

## ನಿನ್ನ ಸಲುಗೆಯ ಬಲುಮೆಯಲಿ

ಸಂಸಾರ ಅಜ್ಞಾನದ ಪರಿಣಾಮ. ಅದನ್ನು ಜ್ಞಾನದಿಂದ ನೀಗಬೇಕು. ಅದೇ ಮುಕ್ತಿ.

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**

ಮುಕ್ತಿಗೆ ಜ್ಞಾನಸಂಪಾದನೆ ಮಾಡಬೇಕು. ಭಕ್ತಿ ಏಕೆ? ಅದು ಲೌಕಿಕ ಸಂಪತ್ತಿಗೆ ಸ್ವರ್ಗ ಸುಖಕ್ಕೆ ಮಾರ್ಗವಾದಿತಷ್ಟೆ ಎಂದು ನಮಗೆ ಅನಿಸಬಹುದು. ಆದರೆ ಜ್ಞಾನಸಂಪಾದನೆಗೂ ಬಿಂಬನ ಭಕ್ತಿ ಬೇಕು. ಅವನೊಲಿಮೆ ಬೇಕು. ಆಗ ಪ್ರಶ್ನೆ ಬರುತ್ತದೆ. ಬಿಂಬನೊಲುಮೆಗೆ ಅವನ ಜ್ಞಾನಬೇಕು. ಅವನ ಜ್ಞಾನಕ್ಕೆ ಅವನೊಲುಮೆ ಬೇಕು. ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು. ಇದಕ್ಕೆ ದಾಸರು ಹೇಳುತ್ತಾರೆ. ಹರಿ ಮೊದಲೇ ಒಲಿದು ನಮ್ಮ ಶರೀರದಲ್ಲಿದ್ದಾನೆ. ಅವನೊಲುಮೆಯಿಂದಲೆ ಭಕ್ತಿ ಜ್ಞಾನ ಎಲ್ಲವೂ. ಅವನ ಸಲುಗೆಯೇ ನಮಗೆ ಬಲ.

## ಬರಸೆಳೆವೆ ಮುಕುತಿಯ ಲಲನೆಯನು

ಮುಕುತಿ, ಮುಕ್ತಿ ಜೀವಾತ್ಮನಿಗೆ ಲಲನೆ, ಪ್ರೇಯಸಿ, **'ಲಲ ಈಪ್ಸಾಯಾಂ'** ಈಪ್ಸೆ ಎಂದರೆ ಬಯಕೆ ಪ್ರೀತಿ. ಪರಮಾತ್ಮಜ್ಞಾನದಿಂದ ಅಭಿವ್ಯಕ್ತವಾಗುವ ಆತ್ಮಾನಂದವೇ ಮುಕ್ತಿ. ಅದು ಆತ್ಮನಿಗಿಂತ ಬೇರೆಯಲ್ಲದಿದ್ದರೂ ದೀಪ ಬೇರೆಯಲ್ಲ, ಅದರ ಬೆಳಕು ಬೇರೆ ಅಲ್ಲ ಹೇಗೋ ಹಾಗೆ ಇದು. ಆನಂದ ಆತ್ಮನದು, ಅದು ಅವನಿಗೆ ಬೇಕು ಹರಿಯೊಲುಮೆಯಿಂದ ಸರ್ವಾಂಗಪುಷ್ಟವಾಗಿ ಸುಂದರವಾಗಿ ಚೆಲುವಾದ ಪ್ರೇಯಸಿಯಂತೆ ಅದು ಒದಗಿ ಬಂದಾಗ ತಳುವಿಲ್ಲದೆ ಬೇಗನೆ ತನ್ನೆಡೆಗೆ ಬಾಚಿಕೊಳ್ಳುತ್ತಾನೆ, ಪ್ರೀತಿಯಿಂದ ಬರಸೆಳೆದು ಅಪ್ಪಿಕೊಳ್ಳುತ್ತಾನೆ. ಅಪ್ಪಿಕೊಂಡು **'ಪ್ರಿಯಯಾ ಸಂಪರಿಷ್ವಕ್ತೋನಬಾಹ್ಯಂ ಕಿಂಚನ ವೇದ ನಾಂತರಂ'** ಎಂದು ಉಪನಿಷತ್ತು ಹೇಳುವಂತೆ ಬೇರೆಲ್ಲ ಮರೆಯುತ್ತಾನೆ. 'ಹರಿ, ನಾನಿನ್ನ ಒಲುಮೆಯ ಸಲುಗೆಯ ಬಲದಿಂದ ಮುಕುತಿ ಲಲನೆಯನ್ನು ತಳುವಿಲ್ಲದೆ ಬೇಗನೆ ನನ್ನೆಡೆಗೆ ಬರಮಾಡಿಕೊಂಡು ಬರಸೆಳೆದು ಕೊಳ್ಳುತ್ತೇನೆ' ಎನ್ನುತ್ತಾರೆ ದಾಸರು. ಅವರಿಗೆ ತಾನು ಮುಕ್ತಿ ಹೊಂದುವೆನೆಂದು ದೃಢವಿಶ್ವಾಸವಿದೆ. ಈ ವಿಶ್ವಾಸವೂ ಮೋಕ್ಷ ಸಾಧನೆಗಳಲ್ಲಿ ಒಂದು.

## ರಕ್ಷಿಸುನಮ್ಮನನವರತ

ಹರಿ ನೀನು ನಮ್ಮನ್ನು ಸದಾ ಕಾಪಾಡು. ಶುಚಿಯಾದ ಪವಿತ್ರವಾದ ಮನೆತನದಲ್ಲಿ ಸದ್ವೈಷ್ಣವ ಜನ್ಮ ನೀಡಿ ಸಲುಗೆಯಿಂದ ನನ್ನ ಶರೀರದೊಳಗೆ ಇದ್ದು ನನ್ನಿಂದ ಮೋಕ್ಷಸಾಧನೆ ಮಾಡಿಸು, ದಾರಿತಪ್ಪದಂತೆ ನೋಡಿಕೊಳ್ಳು, ಬೇಗನೆ ನನ್ನ ಆತ್ಮಾನಂದವನ್ನು ಅಭಿವ್ಯಕ್ತಗೊಳಿಸಿ ನಿತ್ಯ ಸುಖಿಯನ್ನಾಗಿ ಮಾಡು ತಡಮಾಡಬೇಡ ಎನ್ನುತ್ತಿದ್ದಾರೆ ದಾಸರು.

★

**ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.**

# ಅಹಿಂಸಾ ಪರಮೋ ಧರ್ಮಃ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ತಪಸ್ಸು ವಿದ್ಯೆಗಳಿಂದ ಮಹಾಂತರಾದ ಸಂತ 'ಸ್ಥೂಲಕೇಶ' ಎಂಬ ಋಷಿಗಳಿದ್ದರು. ಅದೇ ಕಾಲದಲ್ಲಿ ಮೇನಕೆ ಎಂಬ ಅಪ್ಸರೆ ವಿಶ್ವಾವಸು ಎಂಬ ಗಂಧರ್ವರಾಜನಿಂದ ಪಡೆದ ತನ್ನ ಗರ್ಭಸಂಜಾತ ಹೆಣ್ಣು ಶಿಶುವನ್ನು ಸ್ಥೂಲಕೇಶ ಋಷಿಗಳ ಆಶ್ರಮದ ಪರಿಸರದಲ್ಲಿರುವ ನದಿಯ ತೀರದಲ್ಲಿ ನಿರ್ದಯಳಾಗಿ ಬಿಟ್ಟು ಹೋದಳು. ಅಪೂರ್ವ ಸೌಂದರ್ಯವನ್ನು ತುಂಬಿಕೊಂಡ ಆ ಕಮನೀಯ ಕನ್ಯಾಶಿಶುವನ್ನು ನೋಡಿದ ಸ್ಥೂಲಕೇಶ ಋಷಿಗಳು ಕೃಪೆಯಿಂದ ಆ ಮಗುವನ್ನು ಎತ್ತಿಕೊಂಡರು. ಪ್ರೀತಿಯಿಂದ ಪೋಷಣೆ ಮಾಡಿದರು. ಕಾಲಕಾಲಕ್ಕೆ ಜಾತಕರ್ಮಾದಿ ಕ್ರಿಯೆಗಳನ್ನೆಲ್ಲ ನಡೆಸಿದರು. ಸತ್ತ್ವರೂಪಗುಣಾನ್ವಿತಳಾಗಿ ಬೆಳೆದ ಆ ಮಗುವಿಗೆ ಪ್ರಮದೆಯರಿಗಿಂತ ವರಳಾಗಿದ್ದಳೆಂದು 'ಪ್ರಮದ್ವರಾ' ಎಂದು ಹೆಸರಿಟ್ಟರು.

ಚ್ಯವನ ಪುತ್ರ ಪ್ರಮತಿಯ ಸುತನಾದ 'ರುರು' ಆ ಆಶ್ರಮಕ್ಕೆ ಬಂದವನು ಪ್ರಮದ್ವರೆಯನ್ನು ಕಂಡು ಖುಷಿಯಾದ. ವಿವಾಹವಾಗಲು ಬಯಸಿದ. ಗೆಳೆಯರ ಮೂಲಕ ತನ್ನ ಆಶೆಯನ್ನು ಸ್ಥೂಲಕೇಶರಿಗೆ ತಿಳಿಸಿದ. ಪ್ರಮತಿಯೂ ತನ್ನ ಮಗನ ಪರವಾಗಿ ಋಷಿಗಳಲ್ಲಿ ಕನ್ಯೆಯನ್ನು ಕೊಡುವಂತೆ ಯಾಚಿಸಿದ. ಋಷಿಗಳೂ ಒಪ್ಪಿದರು. ವಿವಾಹ ನಿಶ್ಚಯವಾಯಿತು.

ಮದುವೆಗೆ ಕೆಲವೇ ದಿವಸಗಳಿರುವಾಗ ಗೆಳತಿಯರೊಂದಿಗೆ ಆಡುತ್ತಿದ್ದ ಪ್ರಮದ್ವರೆ ಪ್ರಮಾದದಿಂದ ಅಡ್ಡ ಮಲಗಿ ನಿದ್ರಿಸುತ್ತಿದ್ದ ಹಾವನ್ನು ತುಳಿದು ಬಿಟ್ಟಳು. ಕೋಪಗೊಂಡ ಸರ್ಪ ಸರ್ರನೆ ಕಾಲಪುರುಷನ ಪ್ರಚೋದನೆಗೊಳಗಾಗಿ ವಿಷದ ಹಲ್ಲುಗಳಿಂದ ಕಚ್ಚಿತು. ಪ್ರಮದ್ವರೆ ಧರೆಗುರುಳಿದಳು. ವಿವರ್ಣಳಾಗಿ ಕಾಂತಿಹೀನಳಾದಳು. ಸರ್ಪದಂಷ್ಟಳಾಗಿ ಸುಪ್ತಳಂತೆ ನೆಲದಲ್ಲಿ ಮಲಗಿದ್ದರೂ ಕಾಣುವವರಿಗೆ ಕರುಣೆ ಹುಟ್ಟುವಂತೆ ಮನೋಹರಳಾಗಿದ್ದಳು.

ಉದ್ದಾಲಕ, ಕರ, ಶ್ವೇತ, ಭರದ್ವಾಜ, ಗೌತಮ, ಪ್ರಮತಿ ಎಲ್ಲ ಮುನಿಗಳೂ ಓಡಿ ಬಂದರು. ಅವರೆಲ್ಲ ವಿಷದಿಂದ ಪ್ರಾಣರಹಿತಳಾಗಿ ನೆಲದಲ್ಲಿ ಬಿದ್ದಿರುವ ಪ್ರಮದ್ವರೆಯನ್ನು ನೋಡಿ ಕಕ್ಕುಲಾತಿಯಿಂದ ಕರುಣೆವುಕ್ಕಿ ಅಳುತ್ತ ಕುಳಿತರು. ಪ್ರಮದ್ವರೆಯನ್ನು ಪ್ರೇಮಿಸಿದ

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

ರುರು ಅಂತಃಕರಣ ಕರಗಿ ನೀರಾದ. ವನಕ್ಕೆ ಹೋಗಿ ಆಕ್ರಂದನ ಮಾಡಿದ.

ಓ ದೇವರೆ! ನನ್ನ ಪ್ರಿಯತಮೆ ಸುಕುಮಾರಿ ನನಗೆ ಶೋಕವುಂಟುಮಾಡುತ್ತ ನೆಲದ ಮೇಲೆ ಮಲಗಿದ್ದಾಳೆ. ನಾನು ಮಾಡಿದ ದಾನ ತಪಸ್ಸು ಗುರುಪೂಜೆಗಳ ಪುಣ್ಯವಿದ್ದರೆ ಅದರಿಂದ ಇವಳು ಬದುಕಲಿ. ಹುಟ್ಟಿದಾಗಲಿಂದ ಜಿತೇಂದ್ರಿಯನಾಗಿರುವ ಪುಣ್ಯದಿಂದ ಇವಳು ಬದುಕಲಿ. ಸರ್ವೋತ್ತಮ ವಿಷ್ಣುವಿನಲ್ಲಿ ನಾನು ಮಾಡಿರುವ ಭಕ್ತಿಯ ಫಲವಾಗಿ ಇವಳು ಬದುಕಲಿ.

ರುರುವಿನ ವಿಲಾಪ ಕಂಡು ದೇವತೆಗಳಿಗೆ ಅನುಕಂಪವುಂಟಾಯಿತು. ತಮ್ಮ ದೂತನ ಮೂಲಕ ಅವನಿಗೆ ಸಂದೇಶ ಕಳುಹಿಸಿದರು. ದೂತ ಬಂದು ನುಡಿದ. ಆಯುಷ್ಯ ತೀರಿದ ಬಳಿಕ ಮತ್ತೆ ಬದುಕುವ ಮಾರ್ಗಗಳು ಲೋಕದಲ್ಲಿಲ್ಲ. ಪ್ರಮದ್ವರೆ ಆಯುಷ್ಯ ತೀರಿ ಮೃತಳಾಗಿದ್ದಾಳೆ. ಅವಳು ಬೇಕಿದ್ದರೆ ನಿನ್ನ ಅರ್ಧಾಯುಷ್ಯವನ್ನು ಅವಳಿಗೆ ದಾನಮಾಡು ಏಳುತ್ತಾಳೆ.

ದೇವದೂತನ ಮಾತು ಕೇಳಿ ಕೂಡಲೆ ಅರ್ಧಾಯುಷ್ಯವನ್ನು ಪ್ರಮದ್ವರೆಗೆ ಧಾರೆಯೆರೆದನು. ವಿಶ್ವಾವಸು ಹಾಗೂ ದೇವದೂತರು ಯಮಧರ್ಮನಿಗೆ ತಿಳಿಸಿದರು. 'ರುರು ಅರ್ಧಾಯುಷ್ಯವನ್ನಿತ್ತಿರುವನು. ಪ್ರಮದ್ವರೆಯನ್ನು ಕಳುಹಿಸಿ ಬದುಕಿಸು.'

ಪ್ರಮದ್ವರೆ ಎಚ್ಚರಗೊಂಡು ನಿಂತಳು. ರುರುವಿಗೆ ಬಹಳ ಸಂತೋಷವಾಯಿತು. ಶುಭದಿವಸದಲ್ಲಿ ತಂದೆ–ತಾಯಿಗಳು ಬಂದು ಇಬ್ಬರ ವಿವಾಹ ಕಾರ್ಯವನ್ನು ಸಂಭ್ರಮದಿಂದ ನೆರವೇರಿಸಿದರು.

ಸುಖೀ ದಾಂಪತ್ಯ ರುರು–ಪ್ರಮದ್ವರೆಯರ ಪಾಲಾಯಿತು. ಆದರೆ ತನ್ನ ಹೆಂಡತಿಯ ಸಾವಿಗೆ ಕಾರಣವಾದ ಸರ್ಪಜಾತಿಯ ಮೇಲೆ ರುರುವಿಗೆ ಕೋಪ ಬಂತು. ಸರ್ಪಸಮೂಹ ಸಂಹಾರದ ಪಣ ತೊಟ್ಟ. ಸಿಕ್ಕ ಸಿಕ್ಕ ಸರ್ಪಗಳನ್ನು ಕೋಲಿನಿಂದ ಬಡಿದು ಬಡಿದು ಕೊಲ್ಲಲು ತೊಡಗಿದ. ಹೀಗೊಮ್ಮೆ ಸರ್ಪಗಳನ್ನು ಹುಡುಕುತ್ತ ಕೋಲು ಹಿಡಿದು ಕಾಡಿಗೆ ತೆರಳಿದ. ಮಲಗಿದ್ದ ಮುದಿ ನೀರಹಾವನ್ನು ಕಂಡು ದಂಡ ಎತ್ತಿದ. ನೀರ ಹಾವು ಕೇಳಿತು. ನಿರಪರಾಧಿಯಾದ ಅಶಕ್ತನಾದ ನನ್ನನ್ನು ಏಕೆ ರೋಷದಿಂದ ಹಿಂಸೆಗೊಳಿಸುವಿ?

ನನ್ನ ಪ್ರಾಣಸಮಳಾದ ಮಡದಿಯನ್ನು ಹಾವು ಕಚ್ಚಿ ಸಾಯಿಸಿತು. ಅದಕ್ಕಾಗಿ ಸರ್ಪಜಾತಿಯ ಮೇಲೆಯೇ ನನಗೆ ಕೋಪ. ಅದರಿಂದಲೇ ನಿನ್ನನ್ನು ಕೊಲ್ಲಲು ಬಯಸಿರುವೆ ಎಂದ ರುರು. ಮಾನವರನ್ನು ಕಚ್ಚಿ ಕೊಲ್ಲುವ ಸರ್ಪಜಾತಿಯೇ ಬೇರೆ. ನಾವು ಯಾರನ್ನೂ

ಕೊಲ್ಲದ ಜಾತಿಯವರು. ಯಾವುದೋ ಸರ್ಪ ನಿನ್ನ ಪತ್ನಿಯನ್ನು ಕೊಂದ ಕೋಪಕ್ಕೆ ಎಲ್ಲ ಸರ್ಪಜಾತಿಯನ್ನೇ ಕೊಲ್ಲುವುದು ಎಷ್ಟು ಸರಿ? ಧರ್ಮಜ್ಞನಲ್ಲವೇ ನೀನು.

ಭೀತಿಗೊಂಡ ಹಾವನ್ನು ನೋಡಿ ಸಮಾಧಾನಪಡಿಸುವ ಸಲುವಾಗಿ ಯಾವ ಕರ್ಮದ ಫಲವಾಗಿ ಈ ಹಾವಿನ ಜನ್ಮ ಬಂತು ಹೇಳು ಎಂದ ರುರು.

ಹಿಂದಿನ ಜನ್ಮದಲ್ಲಿ ನನಗೆ ಖಗಮ ಎಂಬ ಬ್ರಾಹ್ಮಣಮಿತ್ರನಿದ್ದ. ಬಾಲ್ಯದಲ್ಲೊಮ್ಮೆ ನಾನು ಹುಲ್ಲಿನಿಂದ ಹಾವಿನ ಆಕೃತಿಯನ್ನು ಮಾಡಿ ಅಗ್ನಿಹೋತ್ರದಲ್ಲಿ ತೊಡಗಿದ್ದ ಮಿತ್ರನಿಗೆ ಹೆದರಿಸಿದೆ. ಅವನು ಗಾಬರಿಯಾಗಿ ಎಚ್ಚರ ತಪ್ಪಿಬಿದ್ದ. ಎಚ್ಚರಗೊಂಡ ಮೇಲೆ ಕೋಪದಿಂದ ಸರ್ಪಾಕೃತಿಯಾಗಿ ನನಗೆ ಹೆದರಿಸಿದೆಯಲ್ಲ ನೀನು ಸರ್ಪನಾಗಿಯೇ ಹುಟ್ಟುವಿ ಎಂದು ಶಾಪವಿತ್ತ. ಹೆದರಿ ಕಾಲಿಗೆ ಬಿದ್ದು ಕ್ಷಮೆ ಕೇಳಿದೆ. ಏನೋ ತಮಾಷೆಗೆ ಹೀಗೆ ಮಾಡಿದೆ. ಕ್ಷಮಿಸು ವಿಪ್ರೋತ್ತಮ. ಶಾಪ ಹಿಂದಕ್ಕೆ ಪಡೆ. ಆತಂಕಗೊಂಡ ನನ್ನನ್ನು ನೋಡಿ 'ನನ್ನ ಮಾತು ಸುಳ್ಳಾಗದು. ಪ್ರಮತಿ ತನಯನಾದ ರುರುವಿನ ದರ್ಶನದಿಂದ ನಿನ್ನ ಸರ್ಪ ಜನ್ಮ ನಿವೃತ್ತಿಯಾಗುವುದು' ಎಂದನು. ದೈವಾನುಗ್ರಹದಿಂದ ನಿನ್ನ ದರ್ಶನವಾಯಿತು. ನನ್ನ ಸರ್ಪ ಜನ್ಮ ನಿವೃತ್ತಿಯಾಯಿತೀಗ. ನನ್ನ ಸ್ವರೂಪವನ್ನು ಪಡೆದೆ. ನಿನಗೊಂದು ಹಿತನುಡಿಯನ್ನು ಹೇಳುತ್ತೇನೆ ಕೇಳು.

**ಅಹಿಂಸಾ ಪರಮೋ ಧರ್ಮಃ ಸರ್ವಪ್ರಾಣಭೃತಾಂ ವರ**
**ತಸ್ಮಾತ್ಪ್ರಾಣಭೃತಃ ಸರ್ವಾನ್ ನ ಹಿಂಸ್ಯಾದ್ ಬ್ರಾಹ್ಮಣಃ ಕ್ವಚಿತ್ ॥**
**ಬ್ರಾಹ್ಮಣಃ ಸೌಮ್ಯ ಏವೇಹ ಭವತೀತಿ ಪರಾ ಶ್ರುತಿಃ ॥**

ಎಲ್ಲರೂ ಅನುಸರಿಸಬೇಕಾದ ಪರಮಧರ್ಮ ಅಹಿಂಸೆ. ಆದ್ದರಿಂದ ಎಂದೂ ಬ್ರಾಹ್ಮಣನಾದವನು ಯಾರನ್ನೂ ಹಿಂಸೆಗೊಳಿಸಬಾರದು. ಬ್ರಾಹ್ಮಣನು ಸೌಮ್ಯನಾಗಿಯೇ ಇರಬೇಕೆಂದು ಶ್ರುತಿ ಸಾರುತ್ತಿದೆ.

ವೇದವೇದಾಂಗವಿಜ್ಞಾನ, ಸರ್ವಭೂತಅಭಯಪ್ರದಾನ, ಅಹಿಂಸೆ, ಸತ್ಯವಚನ, ಕ್ಷಮೆ, ಇವು ಬ್ರಾಹ್ಮಣನ ಪರಮಧರ್ಮ, ಆಯುಷ್ಯ ತೀರಿ ಕರ್ಮಫಲವಾಗಿ ಹಾವು ಕಚ್ಚಿ ಹೆಂಡತಿ ಸತ್ತರೆ ಜನಾಂಗೀಯ ದ್ವೇಷದಿಂದ ಸರ್ಪಸಂಕುಲವನ್ನೆ ಸಂಹರಿಸುವುದು ಬ್ರಾಹ್ಮಣನಾದ ನಿನಗೆ ಧರ್ಮವಲ್ಲ.

ರುರುವಿಗೆ ಆ ಋಷಿಯ ಮಾತು ಕೇಳಿ ತನ್ನ ತಪ್ಪಿಗೆ ಪಶ್ಚಾತ್ತಾಪವಾಯಿತು.

ತನ್ನ ಅರ್ಧಾಯುಷ್ಯವನ್ನೇ ಪ್ರಿಯತಮೆಗೆ ಕೊಟ್ಟು ಅವಳನ್ನು

**(26ನೇ ಪುಟಕ್ಕೆ)**

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

# ಜೀವನಯಜ್ಞದ ಸಮರ್ಪಣೆಗೊಂದು ಸುವರ್ಣಾವಕಾಶ

**ವಿಷ್ಣೋಃ ಸಹಸ್ರನಾಮ್ನಸ್ತು ಯತ್ತದ್ ರೂಪಸಹಸ್ರಕಮ್ ।**
**ಬೃಹತೀಸಹಸ್ರಮೇತಚ್ಚ ತದ್‌ವಕ್ತಿ ಹಿ ಪೃಥಕ್‌ಪೃಥಕ್**

ಬೃಹತೀಛಂದಸ್ಸಿನ ಸಾವಿರ ಋಙ್ಮಂತ್ರಗಳನ್ನೊಳಗೊಂಡ ಬೃಹತೀಸಹಸ್ರ ಸ್ತೋತ್ರವು ತನ್ನಲ್ಲಿರುವ 72 ಸಾವಿರ ಅಕ್ಷರಗಳಿಂದ ಪ್ರತಿಯೊಬ್ಬ ವ್ಯಕ್ತಿಯ ದೇಹದಲ್ಲಿರುವ 72 ಸಾವಿರ ನಾಡಿಗಳಲ್ಲಿರುವ 72 ಸಾವಿರ ಭಗವದ್ರೂಪಗಳನ್ನೂ, ಪ್ರತಿಯೊಬ್ಬನ ನೂರುವರ್ಷ ಆಯುಷ್ಯದ 36 ಸಾವಿರ ಹಗಲುಗಳನ್ನೂ 36 ಸಾವಿರ ರಾತ್ರಿಗಳನ್ನೂ ನಿಯಂತ್ರಿಸುತ್ತ ಸೂರ್ಯನಲ್ಲಿರುವ 72 ಸಾವಿರ ಭಗವದ್ರೂಪಗಳನ್ನೂ ಸ್ತುತಿಸುತ್ತಿರುವ 'ಜೀವನಶಾಸ್ತ್ರ' ಎನಿಸಿದೆ. ಅಂತಹ ಬೃಹತೀಸಹಸ್ರದ ಸಾವಿರಋಕ್‌ಗಳ ಮೂಲಕ ವಿಷ್ಣುಸಹಸ್ರನಾಮ. ಅಂದರೆ ವಿಷ್ಣುಸಹಸ್ರನಾಮದ ಒಂದೊಂದು ನಾಮದ ವ್ಯಾಖ್ಯಾನರೂಪದಲ್ಲಿ ಬೃಹತೀಸಹಸ್ರದ ಒಂದೊಂದು ಋಕ್ ಹೊರಟಿದೆ. ಆದುದರಿಂದ ಬೃಹತೀಸಹಸ್ರದಂತೆಯೇ ವಿಷ್ಣುಸಹಸ್ರನಾಮವೂ 'ಜೀವನಶಾಸ್ತ್ರ'.

ಸಾಧಕರೇ,

ಸಾಧನಶರೀರವನ್ನು ನೀಡಿ, ನಮ್ಮಿಂದ ನಮ್ಮ ಯೋಗ್ಯತಾನುಸಾರವಾಗಿ ಸಾಧನೆ ನಡೆಸಿದ ಭಗವಂತನ ಅನುಗ್ರಹದ ಸ್ಮರಣೆಗಾಗಿ ನಮ್ಮ ಬದುಕಿನ ಅರವತ್ತು ವಸಂತಗಳನ್ನು ಕಂಡ, ಎಂಬತ್ತು ಚಂದ್ರೋದಯಗಳನ್ನು ಕಂಡ ಇತ್ಯಾದಿ ಪ್ರಮುಖ ಘಟ್ಟಗಳಲ್ಲಿ ಭಗವಂತನಿಗೆ ಪ್ರಿಯವಾದ ಏನನ್ನಾದರೂ ಅರ್ಪಿಸಬೇಕೆಂದು ಕೆಲವು ಸಾಧಕರಿಗಾದರೂ ಅನಿಸದಿರಲಿಕ್ಕಿಲ್ಲ. ಅಂತಹವರಿಗೆ ಸಾಧನೆಗೊಂದು ಸುವರ್ಣಾವಕಾಶ ಹೀಗಿದೆ. 'ಜೀವನಶಾಸ್ತ್ರ' ಎಂದೆನಿಸಬಲ್ಲ ವಿಷ್ಣುಸಹಸ್ರನಾಮವನ್ನು ಕನ್ನಡದ ವಿಸ್ತೃತವ್ಯಾಖ್ಯಾನಸಹಿತವಾಗಿ ಪುನರ್ಮುದ್ರಿಸುವಲ್ಲಿ ಆರ್ಥಿಕ ನೆರವು ನೀಡುವ ಮೂಲಕ ವಿಷ್ಣುಸಹಸ್ರನಾಮದ ಸೇವೆಯನ್ನು ಸಲ್ಲಿಸಬಹುದಾಗಿದೆ.

★ ಐನ್ನೂರಕ್ಕಿಂತಲೂ ಅಧಿಕ ಪುಟಗಳ ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಂಡಿದ್ದ ಕನ್ನಡದ ವಿಸ್ತೃತವ್ಯಾಖ್ಯಾನಸಹಿತವಾದ ವಿಷ್ಣುಸಹಸ್ರನಾಮದ ಕೃತಿ ಸರ್ವಮೂಲದ ಸಂದೇಶಗಳನ್ನು ವಿಷ್ಣುಸಹಸ್ರನಾಮಾರೂಢವಾಗಿ ಪ್ರಸ್ತುತಪಡಿಸುತ್ತಿದೆ.

★ ಪಲಿಮಾರುಮಠದ ಶ್ರೀವಿದ್ಯಾಮಾನ್ಯತೀರ್ಥರು ತಮ್ಮ ಎರಡನೆಯ ಶ್ರೀಕೃಷ್ಣಪೂಜಾಪರ್ಯಾವಧಿಯಲ್ಲಿ ವಿದ್ವಾಂಸರ ಮೂಲಕ ಈ ವಾಙ್ಮಯ ಸೇವೆಯನ್ನು ಮಾಡಿಸಿ, ಶ್ರೀಕೃಷ್ಣನಿಗೆ 'ಜ್ಞಾನಪುಷ್ಪ' ವನ್ನಾಗಿ ಇದನ್ನು ಸಮರ್ಪಿಸಿದ್ದರು.

★ ಶ್ರೀವಿದ್ಯಾಮಾನ್ಯತೀರ್ಥರು ಪ್ರತಿಯೊಂದು ನಾಮದ ಅರ್ಥದಲ್ಲಿ ಪ್ರಸ್ತುತವಾದ ಪ್ರಮೇಯಕ್ಕೆ

**ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.**

ಸಂಬಂಧಿಸಿದಂತೆ ತಮ್ಮ ವಿಚಾರಧಾರೆಯನ್ನು 'ಜಿಜ್ಞಾಸಾ' ರೂಪದಿಂದ ಇದರಲ್ಲಿ ಪ್ರಸ್ತುತಪಡಿಸಿರುವರು.

★ ಪುನರ್ಮುದ್ರಣದಲ್ಲಿ ಪಲಿಮಾರುಮಠದ ಶ್ರೀವಿದ್ಯಾಧೀಶತೀರ್ಥರು ಪ್ರತಿಯೊಂದು ನಾಮಕ್ಕೆ ಸಂಬಂಧಿಸುವ ಬೃಹತೀಸಹಸ್ರದ ಋಙ್ಮಂತ್ರವನ್ನು ಸರಳಾರ್ಥಸಹಿತವಾಗಿ ನೀಡಿ ಅನುಗ್ರಹಿಸಲಿದ್ದಾರೆ.

ಹೀಗೆ ಸಹಸ್ರನಾಮಪ್ರತಿಪಾದ್ಯ ಭಗವಂತನಿಗೂ, ಶ್ರೀಮಧ್ವಗುರುಗಳಿಗೂ ಅತ್ಯಂತಪ್ರಿಯವೆನಿಸುವ ಈ ವಿಶಿಷ್ಟಕೃತಿಯ ಪುನರ್ಮುದ್ರಣಕ್ಕೆ ಸುಮಾರು ನಾಲ್ಕು ಲಕ್ಷರೂ. ಅವಶ್ಯಕವೆಂದು ಅಂದಾಜಿಸಲಾಗಿದ್ದು, ಸಾಧಕರು ಈ ಆರ್ಥಿಕ ಭಾರವನ್ನು ಹೊರುವ ಮೂಲಕ ಸಹಸ್ರನಾಮದ ಸೇವೆಯನ್ನು ನಡೆಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, ಪಲಿಮಾರುಮಠ, ಉಡುಪಿ, ಇಲ್ಲಿ ವಿಚಾರಿಸಿ.

**ವಿಷ್ಣುಸಹಸ್ರನಾಮದ ಕೆಲವೇ ಪ್ರತಿಗಳು ಉಳಿದಿವೆ.**

ಶ್ರೀವಿದ್ಯಾಮಾನ್ಯತೀರ್ಥರು ತಮ್ಮ ದ್ವಿತೀಯ ಪರ್ಯಾಯಾವಧಿಯಲ್ಲಿ ವಿದ್ವಾಂಸರಿಂದ ಸಿದ್ಧಪಡಿಸಿ ಉಡುಪಿ ಶ್ರೀಕೃಷ್ಣಿಗೆ 'ಜ್ಞಾನಪುಷ್ಪ'ವಾಗಿ ಸಮರ್ಪಿಸಿರುವ ವಿಷ್ಣುಸಹಸ್ರನಾಮ (ಕನ್ನಡದ ವಿಸ್ತೃತವ್ಯಾಖ್ಯಾನದಿಂದ ಸಹಿತವಾದ) ದ ನಾಲ್ಕು ಸಂಪುಟಗಳಲ್ಲಿ ಮೊದಲ ಮೂರು ಸಂಪುಟಗಳ ಕೆಲವು ಪ್ರತಿಗಳಷ್ಟೇ ಉಳಿದಿವೆ.

★ ಪ್ರತಿಯೊಂದು ಸಂಪುಟವೂ ಸುಮಾರು 800ಕ್ಕಿಂತಲೂ ಅಧಿಕಪುಟಗಳನ್ನೊಳಗೊಂಡಿದ್ದು ಬರೇ ನೂರು ರೂ. ಬೆಲೆಗೆ ದೊರಕಲಿದೆ.

★ ಸರ್ವಮೂಲಗ್ರಂಥಗಳ ಸಂದೇಶಗಳನ್ನು ವಿಷ್ಣುಸಹಸ್ರನಾಮಾರೂಢವಾಗಿ ಪ್ರಸ್ತುತಪಡಿಸುತ್ತಿರುವ ಈ ಕೃತಿಯಲ್ಲಿ ಪ್ರತಿಯೊಂದು ನಾಮಕ್ಕೂ ಕನಿಷ್ಠ ಐದಾರು ಅರ್ಥಗಳು ನಿರೂಪಿತವಾಗಿವೆ. ಅಲ್ಲದೆ ಪ್ರತಿಯೊಂದು ನಾಮವೂ ಶ್ರೀವಿದ್ಯಾಮಾನ್ಯತೀರ್ಥರ 'ಜಿಜ್ಞಾಸಾ' ಎಂಬ ವಿಚಾರಧಾರೆಯಿಂದ ಅಲಂಕೃತವಾಗಿದೆ.

★ ಸಂಪುಟವೊಂದಕ್ಕೆ ನೂರರಂತೆ ಮುನ್ನೂರು ರೂ.ಗಳನ್ನು ಅಂಚೆವೆಚ್ಚ ಸಹಿತವಾಗಿ ಕಳುಹಿಸಿ.

ನಾಲ್ಕನೇ ಸಂಪುಟ ಖಾಲಿಯಾಗಿದೆಯಾದರೂ ಸದ್ಯದಲ್ಲೇ ನಡೆಯುತ್ತಿರುವ ಪುನರ್ಮುದ್ರಣದ ಅವಧಿಯಲ್ಲಿ ನಾಲ್ಕನೇ ಸಂಪುಟವನ್ನು ಪ್ರತ್ಯೇಕವಾಗಿ ಪ್ರಕಟಿಸಿ, ಮೊದಲ ಮೂರು ಸಂಪುಟಗಳನ್ನು ಖರೀದಿಸಿದವರಿಗೆ ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಗುವುದು.

★

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

# ಶ್ರೀಕೃಷ್ಣ ಮತ್ತು ಸ್ವಭಾವವಾದ

–ಸಗ್ರಿ ರಾಘವೇಂದ್ರ ಉಪಾಧ್ಯಾಯ

ಗಾಂಧೀಜಿಯಂತಹ ಒಬ್ಬ ಮನುಷ್ಯನೂ ಅಹಿಂಸಾಮಾರ್ಗದಿಂದಲೇ ತನ್ನ ಉದ್ದೇಶವನ್ನು ಈಡೇರಿಸಿರುವಾಗ ಜಗದೊಡೆಯ ಕೃಷ್ಣ ಯಾಕೆ ಹಿಂಸಾಮಾರ್ಗವನ್ನು ಹಿಡಿದ? ಮಹಾಭಾರತಯುದ್ಧರೂಪದ ಹಿಂಸೆಯನ್ನು ತಪ್ಪಿಸಿ ಪಾಂಡವರಿಗೆ ನ್ಯಾಯ ಒದಗಿಸಲು ಅವನಿಗೆ ಆಗುತ್ತಿದ್ದಿಲ್ಲವೇ? ಆಗುವುದಾದರೂ ಉದ್ದೇಶಪೂರ್ವಕವಾಗಿಯೇ ಹಿಂಸಾಮಾರ್ಗವನ್ನು ಆರಿಸಿಕೊಂಡನೇ? ಎಂದು ಸಹಜವಾಗಿ ಏಳಬಹುದಾದ ಸಂದೇಹಗಳ ಪರಿಹಾರ ಮುಖ್ಯವಾಗಿ ಶ್ರೀಕೃಷ್ಣ ಆಯ್ಕೆ ಮಾಡಿದ ಮಾರ್ಗ ಹಿಂಸಾಮಾರ್ಗ ಅಲ್ಲ ಎಂಬ ಅಂಶವನ್ನೂ , ಶ್ರೀಕೃಷ್ಣನಿಗೆ ಬೇರೆಯೇ ಮಾರ್ಗವನ್ನು ಅವಲಂಬಿಸಲು ಬೇಕಾದ ಸಾಮರ್ಥ್ಯವೂ ಇದ್ದೇ ಇತ್ತು ಎಂಬ ಅಂಶವನ್ನೂ ಆದರೂ ಶ್ರೀಕೃಷ್ಣ ಅದೇ ಮಾರ್ಗವನ್ನು ಅವಲಂಬಿಸಿರುವ ಹಿನ್ನಲೆ ಎಂಬ ಅಂಶವನ್ನೂ ಆಧರಿಸಿಕೊಂಡಿದೆ.

**ಹಿಂಸಾಮಾರ್ಗ ಅಲ್ಲ–** ಶ್ರೀಕೃಷ್ಣ ಸಜ್ಜನರಾದ ಪಾಂಡವರಿಗೆ ನ್ಯಾಯ ಒದಗಿಸಿಕೊಡಲು ಮಹಾಭಾರತಯುದ್ಧದ ಮಾರ್ಗವನ್ನು ಹಿಡಿದದ್ದೇನೋ ನಿಜ. ಆದರೆ ಅದು ಅಹಿಂಸಾಮಾರ್ಗವೇ ಹೊರತು ಹಿಂಸಾಮಾರ್ಗವಲ್ಲ. ದೊಡ್ಡ ಹಿಂಸೆಯನ್ನು ತಪ್ಪಿಸುವುದಕ್ಕಾಗಿ ಅಳವಡಿಸಿಕೊಂಡ ಚಿಕ್ಕ ಹಿಂಸೆಯಷ್ಟೇ. ಮಹಾಭಾರತಯುದ್ಧ ನಡೆಯದೆ ಇದ್ದರೆ ರಾಜ್ಯಭಾರದ ಸೂತ್ರ ದುರ್ಯೋಧನನ ಹಿಡಿತದಲ್ಲೇ ಮುಂದುವರಿಯುತ್ತಿತ್ತು. ದುಷ್ಟ ದುರ್ಯೋಧನನ ಕೆಟ್ಟ ಆಳ್ವಿಕೆಗೆ ರಾಷ್ಟ್ರವನ್ನು ಒಳಪಡಿಸಿದರೆ 'ಯಥಾರಾಜಾ ತಥಾ ಪ್ರಜಾಃ' ಎಂದು ಕೆಟ್ಟ ರಾಜನ ಛಾಪಿಗೆ ಒಳಗಾಗಿ ಪ್ರಜೆಗಳೂ ನೈತಿಕವಾಗಿ ಕೆಡುವರು. ಹೀಗೆ ದುರ್ಯೋಧನನ ಆಳ್ವಿಕೆಯ ದುಷ್ಪ್ರಭಾವ ಪ್ರಜೆಗಳ ಮೇಲೆ ಸಾವಿರಾರು ವರ್ಷಗಳ ತನಕ ಮುಂದುವರಿಯುವ ಅಪಾಯ ಇದೆ. ಪ್ರಜೆಗಳೆಲ್ಲ ನೈತಿಕವಾಗಿ ಪತಿತರಾಗುವುದೆಂದರೆ ದುರ್ಯೋಧನನ ಹಿಂಸೆಗೆ ಒಳಗಾದಂತೆಯೇ ತಾನೇ? ಈ ದೊಡ್ಡ ಮಟ್ಟದ ಹಿಂಸೆಯನ್ನು ತಡೆಗಟ್ಟಬೇಕೆಂದರೆ ಇರುವ ಒಂದೇ ಒಂದು ಉಪಾಯ ದುರ್ಯೋಧನನ ಕೈಯಿಂದ ಅಧಿಕಾರದ ಸೂತ್ರವನ್ನು ಕಿತ್ತುಕೊಳ್ಳುವುದು. ಇದಾಗಬೇಕಾದರೆ ಯುದ್ಧ ಅನಿವಾರ್ಯ. ಬೇರೆ ಯಾವ ರೀತಿಯಿಂದಲೂ

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ದುರ್ಯೋಧನನ ಕೈಯಿಂದ ಅಧಿಕಾರವನ್ನು ಕಸಿದುಕೊಳ್ಳಲು ಸಾಧ್ಯವೇ ಇಲ್ಲ. ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣ ಲೆಕ್ಕಾಚಾರ ಹಾಕಿದ. ಮಹಾಭಾರತಯುದ್ಧ ನಡೆದರೆ ಹದಿನೆಂಟು ಅಕ್ಷೌಹಿಣೀಸೇನೆ ನಾಶವಾಗುವುದೇನೋ ನಿಜ. ಆದರೆ ದುರ್ಯೋಧನನ ಕೆಟ್ಟ ಆಳ್ವಿಕೆಯ ದುಷ್ಪ್ರಭಾವದಿಂದ ಪ್ರಜೆಗಳ ನೈತಿಕಪತನರೂಪವಾದ ಹಿಂಸೆಗಿಂತ ಅಕ್ಷೌಹಿಣೀ ಸೇನಾನಾಶರೂಪವಾದ ಹಿಂಸೆಯೇ ವಾಸಿ. ಕ್ಯಾನ್ಸರಿನ ಆಕ್ರಮಣದಿಂದ ಇಡೀ ದೇಹವನ್ನೇ ಕಳಕೊಳ್ಳುವುದಕ್ಕಿಂತ ಕ್ಯಾನ್ಸರ್ ಹಿಡಿದ ಅಂಗವನ್ನಷ್ಟೇ ಶಸ್ತ್ರಚಿಕಿತ್ಸೆಗೊಳಪಡಿಸಿ ಕಿತ್ತು ಹಾಕುವುದೇ ಹೇಗೆ ಒಳಿತೋ ಹಾಗೆ. ಆದ್ದರಿಂದ ಶ್ರೀಕೃಷ್ಣನ ಪ್ರಕಾರ ದೊಡ್ಡ ಅನರ್ಥವನ್ನು ತಪ್ಪಿಸಲು ಅಳವಡಿಸಿಕೊಂಡಿರುವ ಮಹಾಭಾರತಯುದ್ಧದ ಮಾರ್ಗ ಅಹಿಂಸಾ ಮಾರ್ಗವೇ ಹೊರತು ಹಿಂಸಾಮಾರ್ಗವಲ್ಲ. ಆದುದರಿಂದಲೇ ಆ ಮಾರ್ಗದಲ್ಲಿ ಮುಂದುವರಿಯಲು ಅರ್ಜುನನನ್ನು ಪ್ರಚೋದಿಸಿದ ಭಗವದ್ಗೀತಾ ಪರಮಧಾರ್ಮಿಕಕೃತಿ ಎಂಬ ಮನ್ನಣೆಗೆ ಪಾತ್ರವಾಗಿದೆ.

**ಶ್ರೀವೇದವ್ಯಾಸರ ಸಮ್ಮತಿ–** ಆ ಕಾಲದಲ್ಲಿ ದುರ್ಯೋಧನನಿಂದ ಪ್ರಾರಂಭಿಸಿ ಪ್ರತಿಯೊಬ್ಬರ ಗೌರವಕ್ಕೆ ಪಾತ್ರರಾಗಿದ್ದ ವೇದವ್ಯಾಸರ ಪ್ರಕಾರವೂ ಮಹಾಭಾರತಯುದ್ಧ ಹಿಂಸಾಮಾರ್ಗದ ಪ್ರಕ್ರಿಯೆ ಅಲ್ಲ. ಬದಲಾಗಿ ಅಹಿಂಸೆಗೆ ಪ್ರಯೋಜಕವಾದ ಪರಮಧರ್ಮ. ಅಂತಹ ಮಹಾಭಾರತಯುದ್ಧದ ವಿಷಯದಲ್ಲಿ ಹಿಂಸಾರೂಪದ ಅಧರ್ಮದ ಶಂಕೆಗೆ ಒಳಗಾದದ್ದೇ ಯುಧಿಷ್ಠಿರನ ದೊಡ್ಡ ಅಪರಾಧ. ಅದರ ಪರಿಮಾರ್ಜನೆಗಾಗಿ ಆಶ್ವಮೇಧಯಾಗದಿಂದ ಅಚ್ಯುತನನ್ನು ಆರಾಧಿಸಬೇಕೆಂದು ಯುಧಿಷ್ಠರನಿಗೆ ವೇದವ್ಯಾಸರು ಆದೇಶಿಸುವರು.

**'ಅಪಾಪೇ ಪಾಪಶಂಕಿತ್ವಾದಶ್ವಮೇಧೈರ್ಯಜಾಚ್ಯುತಮ್'** ( ಮ.ಭಾರ.ತಾ.ನಿ. 30–3)

ಇಷ್ಟೊಂದು ಪರಮಪವಿತ್ರಧರ್ಮ ಎಂಬ ಹೆಗ್ಗಳಿಕೆಗೆ ಪಾತ್ರವಾದ ಮಹಾಭಾರತಯುದ್ಧ ಹೇಗೆ ತಾನೇ ಹಿಂಸೆಯ ವ್ಯಾಪ್ತಿಯಲ್ಲಿ ಬಂದೀತು?

## ಯುದ್ಧವನ್ನು ತಪ್ಪಿಸುವುದು ಅಸಾಧ್ಯ ಅಲ್ಲ

ದುರ್ಯೋಧನನ ಕೈಯಿಂದ ಅಧಿಕಾರಸೂತ್ರವನ್ನು ಕಿತ್ತುಕೊಳ್ಳಲು ಮಹಾಭಾರತ ಯುದ್ಧ ಅನಿವಾರ್ಯ ಎಂಬ ಮಾತು ನಮ್ಮ ನಿಮ್ಮ ದೃಷ್ಟಿಯಲ್ಲಷ್ಟೇ. ಒಂದೇ ಹಸ್ತದಿಂದ ಗೋವರ್ಧನಪರ್ವತವನ್ನು ಎತ್ತಿ ತಾನು ಭಕ್ತರ ಉದ್ಧಾರಕ್ಕಾಗಿ ಏನು ಮಾಡಲೂ ಸಿದ್ಧ

ಹಾಗೂ ಸಮರ್ಥ ಎಂದು ಸಮರ್ಥಿಸಿದ್ದ ಶ್ರೀಕೃಷ್ಣನ ಪಾಲಿಗೆ ಮಹಾಭಾರತಯುದ್ಧ ಇಲ್ಲದೆಯೇ ದುರ್ಯೋಧನನನ್ನು ಸಿಂಹಾಸನದಿಂದ ಕೆಳಗಿಳಿಸುವ ಕಾರ್ಯವೇನೂ ಅಸಾಧ್ಯ ಅಲ್ಲ.

ತನ್ನ ನೂರು ಮಕ್ಕಳೂ ಸತ್ತು ಬಿದ್ದಿರುವ ಸ್ಮಶಾನಸದೃಶರಣಾಂಗಣವನ್ನು ಕಂಡ ಗಾಂಧಾರಿ ಕೃಷ್ಣನನ್ನು ಶಪಿಸುವ ಮುಂಚೆ ಹೇಳುವ ಮಾತು.

**ಶಕ್ತೇನ ಬಹುಭೃತ್ಯೇನ ವಿಪುಲೇ ತಿಷ್ಠತಾ ಬಲೇ ।**
**................ಇಚ್ಛತೋಪೇಕ್ಷಿತೋ ನಾಶಃ ಕುರೂಣಾಂ ಮಧುಸೂದನ**

**(–ಮ.ಭಾರ.ಸ್ತ್ರೀಪರ್ವ–25–40,41)**

ಯುದ್ಧವನ್ನು ತಡೆಗಟ್ಟಿ ಕುರುಗಳ ನಾಶವನ್ನು ನಿಲ್ಲಿಸಲು ಸಮರ್ಥನಾಗಿದ್ದರೂ ಇಚ್ಛೆಯಿಂದಲೇ ಯುದ್ಧದ ಮೂಲಕ ನಡೆದ ನಾಶದ ಬಗ್ಗೆ ಉಪೇಕ್ಷೆ ತಾಳಿದ್ದಿ ಎಂದು ಹೇಳುವ ಗಾಂಧಾರಿಯ ಮಾತಿನಿಂದ ಸ್ಪಷ್ಟವಾಗುವುದು. ಕೃಷ್ಣನಿಗೇನೂ ಮಹಾಭಾರತಯುದ್ಧ ನಿಲ್ಲಿಸುವುದು ಕೈಲಾಗದ ಕೆಲಸ ಆಗಿರಲಿಲ್ಲ ಎಂದು. ಹಾಗಾದರೆ ಕೃಷ್ಣ ಯಾಕೆ ಯುದ್ಧದ ಮಾರ್ಗ ಹಿಡಿದ?

**ಸ್ವಭಾವವಾದ–** ಶ್ರೀಕೃಷ್ಣನ ನಡತೆಯ ಬಗ್ಗೆ ಬರುವ ಈ ದೊಡ್ಡ ಆಕ್ಷೇಪಕ್ಕೆ ಮಧ್ವಗುರುಗಳು ಪ್ರಚುರಪಡಿಸಿರುವ ಸ್ವಭಾವವಾದವನ್ನು ಒಪ್ಪಿಕೊಳ್ಳದಿದ್ದರೆ ಖಂಡಿತಾ ಸಮಾಧಾನಿಸಲಾಗದು. ಸ್ವಭಾವವಾದದ ನೆರಳಲ್ಲಿ ಪಡೆಯಬಹುದಾದ ಸಮಾಧಾನದ ತಂಗಾಳಿ ಹೀಗಿದೆ. ಭಗವಂತನೇ ಎಲ್ಲ ಜೀವರಿಂದ ಪ್ರತಿಯೊಂದು ಕರ್ಮವನ್ನೂ ಮಾಡಿಸಿ, ಆಯಾ ಕರ್ಮಕ್ಕನುಗುಣವಾಗಿ ಫಲಕೊಡುವವನಾದರೂ ಆಯಾ ಜೀವರ ಸ್ವಭಾವಕ್ಕನುಗುಣವಾಗಿಯೇ ಕರ್ಮವನ್ನು ಮಾಡಿಸುವನು. ಜೀವರ ಸ್ವರೂಪದಂತೆಯೇ ಅವರ ಸ್ವಭಾವವೂ ಅನಾದಿನಿತ್ಯವೆನಿಸಿದ್ದು ಅದರ ಮೇಲೆಯೂ ತನಗೆ ಪ್ರಭುತ್ವ ಇರುವುದಾದರೂ ಭಗವಂತ ಸ್ವಭಾವವನ್ನು ಬದಲಾಯಿಸುವುದಿಲ್ಲ. ಅದಕ್ಕೆ ಅನುಗುಣವಾಗಿಯೇ ಪ್ರೇರಿಸುವನು. ತನ್ನ ಮೂಲ ರೂಪದಲ್ಲಿ ಹೀಗೆ ನಡೆದುಕೊಳ್ಳುವ ಭಗವಂತ ತನ್ನ ಅವತಾರ ರೂಪಗಳಲ್ಲೂ ಇದೇ ರೀತಿಯಾಗಿ ನಡೆದುಕೊಳ್ಳುವುದರಿಂದ ಕೃಷ್ಣಾವತಾರದಲ್ಲೂ ಈ ಸ್ವಭಾವವಾದಕ್ಕೆ ಅನುಗುಣವಾಗಿಯೇ ನಡೆದುಕೊಂಡಿರುವನು. ಆದುದರಿಂದಲೇ ಸ್ವಭಾವತಃ ದುಷ್ಟನಾದ ದುರ್ಯೋಧನನ್ನು

**(29ನೇ ಪುಟಕ್ಕೆ)**

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಉಪನಿಷತ್ ಸಂದೇಶ

ಭಾಗ–18

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಬೆಡಗಿಯ ಬಿನ್ನಾಣಗಳಿಗೆ ಬರೀ ಸಾಹಸ ಸಾಲದು. ಅವಳ ಬಿಂಕ–ಬಿನ್ನಾಣಗಳಿಗೆ ವಯ್ಯಾರಗಳಿಗೆ ತಾಳಹಾಕಲು ತಕ್ಕ ವಾದ್ಯಬೇಕು. ಆದರೂ ಇವನ್ನೆಲ್ಲಾ ಕನಸು ಕಂಡವ ಈಡೇರಿಸಲಾರ. ಈಡೇರಿಸಿದರೂ ತೃಪ್ತಿ ಆಗದು. ಸಂಪಾದಿಸಲು ಸಾಧ್ಯವಿಲ್ಲ. ಮಾನವರಿಗೆ, ಅಲ್ಪಶಕ್ತರಿಗೆ ಅಸಾಧ್ಯ. ಬಾಲಕರಿಗಂತೂ ಸಾಧ್ಯವೇ ಇಲ್ಲ. ನಿನಗೆ ನಾನೇ ನೀಡುವೆ ಎಂದಿದ್ದಾನೆ ಯಮ!.

ಬಾಲಕರಿಗೆ ಸ್ತ್ರೀಯರ ಅಭಿಲಾಷೆ ಇರಲಾರದು. ಇಂದಿನ ಟಿ.ವಿ. ಚಾನೆಲ್ ಯುಗದಲ್ಲಿ ಬಾಲಕರು ಎನ್ನುವವರೇ ದುರ್ಲಭವಾಗಿದೆ ವಿಷಯ ಲಂಪಟತನದ ಅಬ್ಬರ ಅವರಿಗೆ ಸುಖದ ಬಯಕೆ ಇಲ್ಲವಾದರೂ ಅವರಿಂದ ಸೇವಿಸಲ್ಪಡುವ ಪ್ರತಿಷ್ಠೆ ಎಂತಂಥವರಿಗೂ ಬೇಕೆನಿಸೀತು. ಯಮನು ಇದನ್ನು ನೀಡಿದನು. ಎಲ್ಲಾ ಸಂಪತ್ತು–ಸಾಹಸ–ಆಸೆಗಳ ಅಂತಿಮಗುರಿಯೇ ಮನದನ್ನೆಯ ಬಯಕೆಗಳ ಪೂರೈಕೆ. ಅವಳ ನಗುವಿಗಾಗಿ ಏನೆಲ್ಲಾ ಸುರಿದು ಸುಮ್ಮನಾಗುವ ಸ್ತ್ರೀದಾಸ್ಯಕ್ಕೆ ಕೊನೆಯುಂಟೇ? ದೇಶ–ಕಾಲಗಳ ಮಿತಿಯುಂಟೆ?

ಯಂತ್ರಯುಗದಲ್ಲಿ ಯಂತ್ರದಂತೆ ದುಡಿದು ಕೀಟಗಳಾಗಿ ಸಾಯುವವರು ಒಂದು ವಿಧ. ಕಂಪ್ಯೂಟರ್ ಮುಂದೆ ಕುಳಿಯುತ್ತಾ ಅಲ್ಲೇ ಕೊಳೆತು ಹೋಗುವವರು ಒಂದು ವರ್ಗ. ಅವರಿಗೆ ಸಂಪಾದನೆ–ದುಡಿಮೆ ಇವುಗಳ ನಡುವೆ ಸಾಮರಸ್ಯವೇ ಇಲ್ಲ. ಮತ್ತೊಂದು ಆಗರ್ಭಶ್ರೀಮಂತವರ್ಗಕ್ಕೆ ದುಡಿಮೆ ಎಂದರೆ ಜುಗುಪ್ಸೆ. ಹಣವನ್ನು ಮದ್ಯ–ಮನದನ್ನೆಯರಿಗೆ ಸುರಿಯುತ್ತಲೇ ಕಾಲ ಕಳೆವವರು. ಬೆತ್ತಲೆಯ ಸಂಘಗಳು–ಜೂಜುಕೋರರ ಸಂತೆಗಳು, ಇವೆಲ್ಲಾ ಅರಬ್ಬರ ದೇಶದಲ್ಲಿ ಸರ್ವೇ ಸಾಮಾನ್ಯ.

ಭಾರತದ ಭೂಮಿಯಲ್ಲಿ ಬಂದ ಸಾಧಾರಣ ಮಂದಿಯೂ ಸಹ ಇಂದು ಈ ಸುಖಕ್ಕೆ ಮಾರು ಹೋಗಿದ್ದಾರೆ. ಮುಂದೆ ಹೋಗಿದ್ದಾರೆ ಮತ್ತೆಂದೂ ಹಿಂತಿರುಗದಷ್ಟು.

ಹೀಗೆ ಹಿಂತಿರುಗಿದ ದಾರಿಯಾದ ಹೆಂಗಳೆಯರ ಪ್ರಲೋಭನೆಯೊಂದಿಗೆ ಎಲ್ಲಾ ಸುಖಗಳ ಕೊನೆ ಆಗುತ್ತದೆ. ಹೀಗೆ ಯಮನ ಪ್ರಲೋಭನೆಯು ಇಲ್ಲಿಗೆ ಮುಕ್ತಾಯ ಆಗುತ್ತದೆ.

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ನಚಿಕೇತ ಬಾಲಕ ಆದರೂ ಧೈರ್ಯದಲ್ಲಿ ಪರ್ವತವೇ ಸರಿ ಚೂರು ಅಲುಗಾಡಲಿಲ್ಲ.

**ಶ್ವೋಭಾವೋ ಮರ್ತ್ಯಸ್ಯ ಯದಂತಕ ಏತತ್**
**ಸರ್ವೇಂದ್ರಿಯಾಣಾಮ್ ಜರಯಂತಿ ತೇಜಃ ।**
**ಅತಿ ಸರ್ವಂ ಜೀವಿತಮ್ ಅಲ್ಪಂ ಏವ**
**ತವೈವ ವಾಹಾಃ ತವ ನೃತ್ತಗೀತೇ ॥**

ಸಾಯುವ ಮನುಷ್ಯನಿಗೆ ಇವೆಲ್ಲಾ ನಾಳೆಯ ತನಕವೂ ಉಪಯೋಗಕ್ಕೆ ಬಾರದು. ನೀನು ಎಲ್ಲರ ಅಂತಕ. ವಿಷಯ ಭೋಗಗಳು ಎಲ್ಲ ಇಂದ್ರಿಯಗಳ ಶಕ್ತಿಯನ್ನು ಹಣ್ಣು ಹಣ್ಣು ಮಾಡುತ್ತದೆ. ಎಷ್ಟೇ ಬದುಕಿದರೂ ಅದು ಅತ್ಯಲ್ಪವೇ. ವಾಹನವು ನಿನಗೇ ಇರಲಿ, ನೃತ್ಯಗೀತೆಗಳು ನಿನಗೇ ಇರಲಿ.

ಈ ಮಾನವನು ಮರ್ತ್ಯ ಸಾಯಲಿರುವವನು, ಎಂದೋ ಸಾಯುವವನು ಆ ದಿನ ಇಂದೂ ಆಗಬಹುದು. ಈ ಕ್ಷಣವೂ ಆಗಬಹುದು. ತಾನೇ ಸಾವಿನ ಬಾಯಿಗೆ ತುತ್ತಾಗುವಾಗ ಇವೆಲ್ಲಾ ಸುಖ ಏನು ಮಾಡಿಯಾವು? ತಾನೇ ಸತ್ತಾಗ ಇಂದು, ಅವು ಸುಖನೀಡಬಲ್ಲವೇ ನಾಳೆ?

ಆಕಸ್ಮಾತ್ ನಾಳೆ ನಾನು ಇರಬಹುದು. ಇವು ನಾಳೆ ಇರಬೇಕೆಂದಿಲ್ಲ. ಅವು ಅನಿತ್ಯವಾಗಿ ನಾಶವಾಗಲಿಕ್ಕೆ ಇರುವವುಗಳು. ಜೀವ ನಿತ್ಯ. ನಾವು ಸತ್ತಾಗ ದೇಹ ಹೋಗಿ ಬೇರೆ ದೇಹ ಬಂದಾಗ ಮುಂದಿನ ಜನ್ಮದಿ ಈ ಮನೆ ಅನುಭವಿಸಲಾದೀತೆ? ಪುನರ್ಜನ್ಮದಲ್ಲಿ ಈ ಕಾರಿನಲ್ಲಿ ಕೂರಲಾಗುವುದೇ? ಈ ಆಸ್ತಿಗಳು ನಮ್ಮ ಸಂಪಾದನೆಯಿಂದ ಎಂಬುದು ನಿಜ ಇರಬಹುದು. ಆದರೆ ನಮ್ಮ ಸುಖಕ್ಕಾಗಿ ಎಂಬುದು ಸುಳ್ಳಲ್ಲವೆ? ನಾವೇ ರೋಗಕ್ಕೆ ತುತ್ತಾದಾಗ ಮನೆಯ ಸಾಮಗ್ರೀ ಸುಖ ನೀಡದೆ ಅಲರ್ಜಿ ಆಗುವುದಿಲ್ಲವೆ?

ಇಂತಹ ಶ್ವ- ಅಭಾವಃ ನಾಳೆ ದಿನ ಇರದೆ ಇದ್ದರೂ ಅದರ ಬೆಲೆ ಕಡಿಮೆಯಾಗಬಹುದು. ಆಗುತ್ತದಲೆ ಕೆಟ್ಟು ಕೂರಬಹುದು. ಅಥವಾ ಅಪಘಾತದಿಂದ ನಾಶ ಆಗಬಹುದು. ಇದಕ್ಕಾಗಿ ಈ ಬದುಕು ಮೀಸಲಾಗಿಡುವುದೇ?

ಯಮನಿಗೆ ನಚಿಕೇತ 'ಅಂತಕ' ಎಂದು ಕರೆದಿದ್ದಾನೆ. ಅಂದರೆ ಮುಗಿಸುವವನು. ಇಷ್ಟೆಲ್ಲಾ ಕೊಡುವ ನೀನು ಒಂದು ದಿನ ಇವನ್ನೂ ಮುಗಿಸುವವನೂ ಕೂಡ ಆಗಿರುವಿ. ಇಂತಹ ಹಂತಕನಾದ ನಿನ್ನ ಬಳಿ ಯಾವ ಹಂತದವರೆಗೆ ಏನೂ ಕೇಳಿದರೂ ಸಹ ಅದು ನಾಶವೇ ಆಗುವುದಿಲ್ಲವೇ? ಎಂದು ಅಭಿಪ್ರಾಯ.

(ಮುಂದುವರಿಯುವುದು)

**ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.**

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

## ಈಶನ ಪಾಶದಿಂದ ಮೋಕ್ಷ

ಈ ಬಂಧ ಮೋಕ್ಷಗಳಿಗೆ ಹತ್ತಿರದ ಸಂಬಂಧವಿದೆ. ಯಾವುದಕ್ಕೆ ಬಂಧನವೋ ಅದಕ್ಕೆ ಮೋಕ್ಷ. ಬಂಧನವೇ ಇಲ್ಲದೆ ಮೋಕ್ಷವಾದರೂ ಹೇಗೆ? ಸಂಸಾರಿ ಚೇತನರಿಗೆ ಸಂಸಾರವೆಂಬ ಗಲಬಂಧನವನ್ನು ಹೊಸೆದವನೇ ಪಾಶಪಾಣಿಯಾದ ಫಣಿಶಾಯಿ ಆದ್ದರಿಂದ ಕಟ್ಟಿದ ಹರಿಯೇ ಕಟ್ಟನ್ನೂ ತರಿಯಬೇಕು. ಗೋವುಗಳನ್ನು ಕಟ್ಟಿದ ಗೋಪಾಲನೇ ಗೋವುಗಳ ಕಟ್ಟನ್ನೂ ಬಿಡಿಸಿ ಕಾಡಿಗಟ್ಟುವಂತೆ ಪಂಚಭೂತಗಳ ಬಂಧನದಲ್ಲಿ ಸಜ್ಜೀವರೆಂಬ ಗೋವುಗಳನ್ನು ಕಟ್ಟಿದ ಗೋವಿಂದನೇ ದೃಢವಾಗಿ ಕಟ್ಟಿದ ಭವದ ಗಂಟಲು ಸಡಿಲಿಸಿ ಬಿಚ್ಚಬೇಕು. ಅವನು ಬಿಚ್ಚಬೇಕಾದರೆ ಅಚ್ಯುತನು ಮೆಚ್ಚುವಂತೆ ಅವನ ಪಾಶಮೋಚಕ ಗುಣವನ್ನು ನೆಚ್ಚಬೇಕು. "**ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ**" ಎಂಬುದನ್ನು ಅರ್ಥೈಸಿಕೊಂಡು ಅವನನ್ನು ಸ್ತುತಿಸಿದಲ್ಲಿ ಈಶಪಾಶದಿಂದ ಮೋಕ್ಷಹೊಂದುತ್ತಾನೆ.

ಸತ್ಯಸಂಕಲ್ಪನಾದ ಶ್ರೀಹರಿಯು ಮೋಕ್ಷಕಾಮುಕರೆಲ್ಲರೂ ವೇದೋಕ್ತ ಗುಣಚಿಂತನೆಯ ಹಿನ್ನೆಲೆಯಲ್ಲಿ ನಾರಾಯಣನ ಧ್ಯಾನವನ್ನು ನಡೆಸಬೇಕೆಂದು ಸಂಕಲ್ಪಿಸಿದ್ದಾನೆ. ಅವರು ಸಂಪಾದಿಸಿದ ತತ್ವಜ್ಞಾನದ ಹಿನ್ನೆಲೆಯಲ್ಲಿಯೇ ಭಕ್ತಿ ಉದಿಸಿ ಹರಿಯ ಅತ್ಯರ್ಥ ಪ್ರಸಾದ ರೂಪವಾದ ಮೋಕ್ಷ ದೊರಕುತ್ತದೆ. ಈ ಕ್ರಮದ ಹೊರತು ಬೇರೆ ಉಪಾಯದಿಂದ ಮೋಕ್ಷ ದೊರೆಯದು. ಅದಕ್ಕಾಗಿ ಸಾಧಕರಾದವರು ಅಷ್ಟಭುಜಗಳಿಂದ ಯುಕ್ತನಾದ ನಾರಾಯಣನ ಅಷ್ಟಗುಣಗಳನ್ನು ನೆನೆದು ಭವವೆಂಬ ಅರಿಷ್ಟವನ್ನು ಪರಿಹರಿಸಿಕೊಂಡು ಇಷ್ಟಾರ್ಥಗಳನ್ನು ಹೊಂದಬೇಕು.

ಅಂತೂ ಈ ನಾರಾಯಣವರ್ಮದ ನಾರಾಯಣನ ಶ್ಲೋಕವು "**ಶಂಖ–ಸೃಷ್ಟಿ, ಚಕ್ರ–ಸ್ಥಿತಿ, ಚರ್ಮ–ಸಂಹಾರ, ಖಡ್ಗ–ನಿಯಮನ, ಗದಾ–ಜ್ಞಾನ, ಬಾಣ–ಅಜ್ಞಾನ, ಧನುಸ್ಸು–ಬಂಧ, ಹಗ್ಗ–ಮೋಕ್ಷ ಎಂಬ ಎಂಟು ಗುಣಗಳನ್ನು ರೋಚಕವಾಗಿ ಪ್ರತಿಪಾದಿಸುತ್ತಿವೆ**" ಎಂದು ಸಂಕ್ಷೇಪವಾಗಿ ಕಂಡಂತಾಯಿತು.

## ಜಲೇಷು ಮಾಂ ರಕ್ಷತು ಮತ್ಸ್ಯಮೂರ್ತಿಃ

"ಮತ್ಸ್ಯಾವತಾರದ ಶ್ರೀ ಹರಿಯು ನೀರಿನಲ್ಲಿ ಬರುವ ಆಪತ್ತುಗಳಿಂದ ರಕ್ಷಿಸಲಿ. ಜಲಾಭಿಮಾನಿ ವರುಣನ ಪಾಶಕ್ಕೆ ಜಲಾಚರಪ್ರಾಣಿಗಳಿಗೆ ಸಿಕ್ಕದಂತೆಯೂ ಅನುಗ್ರಹಿಸಲಿ"

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

ಬೆಳಿಗ್ಗೆ ಎದ್ದಕೂಡಲೇ ನೀರನ್ನು ನೋಡುತ್ತೇವೆ. **'ಆಪಃ ಸ್ವಭಾವತೋ ಮೇಧ್ಯಾಃ'** ಎಂಬಂತೆ ನೀರಿನಲ್ಲಿ ಸಹಜವಾದ ಪಾವಿತ್ರ್ಯವಿದೆ. ವಸ್ತುಗಳನ್ನು ಪವಿತ್ರೀಕರಿಸುವಲ್ಲಿ ನೀರಿಗಿರುವಷ್ಟು ಸಾಮರ್ಥ್ಯ ಬೇರೆ ಯಾವುದಕ್ಕೂ ಇಲ್ಲ. ಆದರೆ ಈ ನೀರನ್ನೂ ಸ್ವಚ್ಛಮಾಡುವ ಸಾಮರ್ಥ್ಯ ಮೀನಿಗಿದೆ. ಜಲದ ಮಲವನ್ನು ತೊಳೆವ ಹರಿಗೆ ಮತ್ಸ್ಯ ಎಂದು ಹೆಸರು. ಆದುದರಿಂದ ಮತ್ಸ್ಯನ ಸ್ಮರಣೆ ಸ್ವಚ್ಛ ಜಲದಲ್ಲಿ ಬೇಕು.

ನೀರಿಲ್ಲದೆ ಬದುಕುವ ಪ್ರಾಣಿ ಜಗತ್ತಿನಲ್ಲಿ ಯಾವುದೂ ಇಲ್ಲ. ಪ್ರಯಾಣದ ಸಮಯದಲ್ಲಿಯೂ ಜೀವನು ಆಶ್ರಯಿಸುವುದು ನೀರನ್ನು. ಸತ್ತಬಳಿಕ ಬಯಸುವುದೂ ತರ್ಪಣ ನೀರನ್ನೇ. ಹುಟ್ಟುವುದೂ ನೀರಾಗಿಯೇ. ಪ್ರತಿ ಕರ್ಮಗಳ ಆರಂಭ ಕಡೆಗಳಲ್ಲಿ ಬಳಸುವುದು ನೀರನ್ನೇ ಆದ್ದರಿಂದ ಇಲ್ಲಿ 'ಜಲ–ಜಡ' ಎಂಬ ಎರಡು ಪಾಠಗಳಿವೆ. ನೀರು ಜಡ ನಮ್ಮ ಕರ್ಮಗಳೂ ಜಡ. ಜಡವಾದ ಕರ್ಮಗಳಿಗೆ ನೀರು ಬೇಕು. ನೀರಿಗೆ ಯೋಗ್ಯವಾದ ಕರ್ಮಬೇಕು. ಈ ನೀರು–ಕ್ರಿಯೆಗಳ ವಿಹಾರ ಎಷ್ಟು ನಡೆದರೂ ಪ್ರಯೋಜನವಿಲ್ಲ. ನೀರಿನ ಅಭಿಮಾನಿ, ಕ್ರಿಯೆಗಳ ಅಭಿಮಾನಿಗಳನ್ನು ಹುಡುಕಬೇಕು. **'ಅಪ' ಅತಿಶಯೇನ ಪಾವಯತಿ ಇತಿ ಅಪಃ** ಅತಿಶಯವಾಗಿ ಪಾವನಗೊಳಿಸುವ ಹರಿಯು ನೀರಿನಲ್ಲಿ **'ಅಪ'** ಎನಿಸಿದರೆ, **ಕರೋತಿ ಮನುತೇ ಇತಿ ಕರ್ಮ** ಎನಿಸಿದೆ. ಒಟ್ಟಿನಲ್ಲಿ ತಿಳಿದು ಮಾಡಿದ ಕರ್ಮದಲ್ಲಿ ನಿಂತ ಮುಖ್ಯಪ್ರಾಣ ನೀರಿನ ಮೂಲಕ ಹರಿಯ ಪಾದಕ್ಕೆರಗಿ ಅತಿಶಯವಾದ ಪಾವಿತ್ರ್ಯವನ್ನು ತಂದು ಕೊಡುತ್ತಾನೆಂದುದರ ಭಾವ ಈ ಜಡ–ಜಲ ಶಬ್ದಗಳಲ್ಲಿದೆ.

**ನೀರಿನಿಂದ ರಕ್ಷಣೆ ಎಲ್ಲೆಲ್ಲಿ?**

* ನೆತ್ತಿಗೆ ಹತ್ತಿದಾಗ ಪ್ರಾಣದಾನ ನೀರಿನಿಂದ.
* ಕೆಸರು ಮೆತ್ತಿದಾಗ ಸ್ವಚ್ಛತೆ ಸಿಗುವುದು ನೀರಿನಿಂದ.
* ಕರ್ಮಗಳ ಸಾರ್ಥಕ್ಯಕ್ಕೆ ಕೃಷ್ಣಾರ್ಪಣ ನೀರಿನಿಂದ.
* ಅಶುಚಿಯಾದಾಗ ಪಾವಿತ್ರ್ಯ ನೀರಿನಿಂದ.
* ಸೂರ್ಯಮಂಡಲಸ್ಥ ಹರಿಗೆ ಅರ್ಘ್ಯದಾನ ನೀರಿನಿಂದ.
* ಅರ್ಘ್ಯದ ಜಲದಲ್ಲಿ ಬಂದ ಮತ್ಸ್ಯ ಜಲದ ಮಹಿಮೆ ಸಾರಿದ.
* ಜೀವನ ಆಗಮನವು ಲೋಕಕ್ಕೆ ನೀರಿನ ಮೂಲಕವೇ.
* ಜೀವನು ಗರ್ಭಕ್ಕೆ ಪ್ರವೇಶಿಸುವುದೂ ನೀರಿನ ರೂಪದಲ್ಲಿ.
* ಬ್ರಹ್ಮದೇವರು ಮೊದಲ ಪಾದಪೂಜೆಗೆ ಬಳಸಿದ್ದು ನೀರು.
* ಶಿವನು ಮಂಗಳಾಂಗನಾದದ್ದು ಹರಿಪಾದ ಜಲದಿಂದ.
* ಇಂದಿಗೂ ಜಗತ್ತಿಗೆ ಪಾವಿತ್ರ್ಯ ಗಂಗಾಜಲದಿಂದಲೇ.

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**

* ಏಕಾದಶೀ–ದ್ವಾದಶೀಗಳ ಮಹತ್ವ ಉಳಿವುದು ನೀರಿನಿಂದ.
* ನಾರಾಯಣನು ಪವಡಿಸಿರುವುದು ನೀರಿನಲ್ಲಿಯೇ.
* ಹರಿವ ನೀರಿಗೆ ಹರಿಯೇ ಅಭಿಮಾನಿ.
* ಶಾಪ–ವರಗಳಿಗೆ ನೀರು ಮಾಧ್ಯಮ.
* 3 1/2 ಕೋಟಿ ತೀರ್ಥಾಭಿಮಾನಿಗಳವಾಸ ನೀರಿನಲ್ಲಿ.
* ಏಳು–ಬೀಳುಗಳು ನೀರಿನಿಂದ.
* ಜಗತ್ತನ್ನೇ ಮೃದುಗೊಳಿಸುವ ಶಕ್ತಿ ನೀರಿನಲ್ಲಿದೆ.
* ಬ್ರಹ್ಮಾಂಡದ ಒಳ ಹೊರಗೆ ಹೆಚ್ಚು ವ್ಯಾಪಿಸಿರುವುದು ನೀರು.
* ಶರೀರದಲ್ಲಿಯೂ ಜಲೀಯ ಭಾಗವೇ ಅಧಿಕ.
* ಬ್ರಾಹ್ಮಣರ ಬಲಪಾದದಲ್ಲಿ ಹರಿಯು ತೀರ್ಥರಾಜ ಎಂದೇ ಖ್ಯಾತ.
* ಮೇಘಗಳಿಗೆ ಬೆಲೆ ನೀರು ತುಂಬಿದಾಗ, ಜೀವನಕ್ಕೆ ಬೆಲೆ ನೀರಿನ ಆಳ ಅರಿತಾಗ, ನೀರಿದ್ದ ಜಾಗದಲ್ಲಿ ಜಾರುತ್ತಾರೆ. ನಾಲಿಗೆಯೂ ಒದ್ದೆಯಾಗಿರುವುದರಿಂದ ಕೆಲವೊಮ್ಮೆ ಜಾರುತ್ತದೆ. ಅದರಂತೆ ಜಲಕ್ಕೆ 'ಅಪ' ಎಂದೂ, 'ಅಪ' ಎಂದರೆ ಕರ್ಮವೆಂದೂ ಉಪನಿಷತ್ತಿನಲ್ಲಿದೆ. ಕರ್ಮಗಳ ಜಾರುವಿಕೆಯಿಂದ ಮತ್ಸ್ಯನು ಉದ್ದರಿಸಬೇಕು. ಬ್ರಹ್ಮನ ನಿತ್ಯಕರ್ಮಕ್ಕೆ ಸಾಧನವಾದ ವೇದಗಳನ್ನು ಮತ್ಸ್ಯನಾಗಿ ಅಸುರನನ್ನು ಸದೆಬಡಿದು ವೇದಗಳನ್ನು ಬ್ರಹ್ಮನಿಗೆ ಒಪ್ಪಿಸಿ ರಕ್ಷಿಸಿದ.

**ಕೆಂಗಣ್ಣ ಮೀನನಾಗಿ ನಮರಂಗ**
**ಗುಂಗಡಿ ಸೋಮನ ಕೊಂದಾನುಮ**
**ಗುಂಗಾಡಿ ಸೋಮನ ಕೊಂದು ವೇದವ**
**ಬಂಗಾರದೊಡಲಿನಿಗಿತ್ತಾನುಮ ॥** **(ಕನಕದಾಸರು)**

ಸತ್ಯವ್ರತ ಮಹಾರಾಜನು ಸಂಧ್ಯಾಕಾಲದಲ್ಲಿ ಸಂಧ್ಯಾವಂದನೆಗೆ ಕೃತಮಾಲಾ ನದಿಗೆ ಇಳಿದಾಗ ಮತ್ಸ್ಯನ ಸಮಾಗಮವಾಯಿತು. ವೈವಸ್ವತಮನುವಿನ ಬದುಕು ಬದಲಾಯಿತು. ನಮ್ಮೆಲ್ಲರಿಗೂ ಆದಿಗನಾದ ವೈವಸ್ವತ ಮನುವಿಗೆ ಸಂಧಿಕಾಲದಲ್ಲಿ ಅನುಗ್ರಹಿಸಿದವ ಮತ್ಸ್ಯನಾಮಕನಾದ ಶ್ರೀಹರಿ. ಇಲ್ಲಿ ನಮಗೂ ಒಂದು ಸಂದೇಶವಿದೆ. ಉಪನಿಷತ್ತಿನಲ್ಲಿ 'ಸತ್ಯಧರ್ಮ' ಎಂಬ ಹೆಸರಿನಿಂದ ಜೀವರನ್ನು ಕರೆಯಲಾಗಿದೆ. ನಾವು ಸತ್ಯವ್ರತರೇ ಆಗಿ ಸಂಸಾರವೆಂಬ ನದಿಗೆ ಇಳಿದಿದ್ದೇವೆ. ಕರ್ತವ್ಯ ಕರ್ಮಗಳೆಂಬ ಅರ್ಘ್ಯವನ್ನು ಶ್ರೀಹರಿಗೆ ಸಮರ್ಪಿಸುವ ಸಂಧಿಕಾಲ ನಮಗೆ ದೊರಕಿದೆ. ಆದರೆ ನೀರಿನಲ್ಲಿ ಮುಳುಗಿದವ ಕಣ್ಣು

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

ಮುಚ್ಚುವಂತೆ ಸಂಸಾರಸಾಗರದಲ್ಲಿ ಮುಳುಗಿ ಕರ್ತವ್ಯದೃಷ್ಟಿಗಳನ್ನು ಮುಚ್ಚಿಕೊಂಡಿದ್ದೇವೆ. ಮನುವಿಗೆ ಕರ್ತವ್ಯದ ಎಚ್ಚರವನ್ನು ಮತ್ಸ್ಯನಾಗಿ ಶ್ರೀಹರಿಯು ನೀಡಿದಂತೆ, ನೀರಿನಲ್ಲಿ ಮುಳುಗಿದರೂ ಕಣ್ಣು ಮುಚ್ಚದ ಪ್ರಾಣಿ ಮತ್ಸ್ಯ. ಮತ್ಸ್ಯದ ರೂಪದಲ್ಲಿ ಬಂದು ಶ್ರೀಹರಿಯು ಕಣ್ಣು ಮುಚ್ಚದೆ ಕರ್ತವ್ಯಗಳನ್ನು ಎಚ್ಚರಿಸುತ್ತಾನೆ. ಸತ್ಯವ್ರತ ರಾಜನು ಅರ್ಘ್ಯಬಿಡುವಾಗ ಕೈಗೆ ಬಂದ ಮತ್ಸ್ಯವನ್ನು ಕೆಳಕ್ಕೆ ಚಲ್ಲಿದ. ಆವಾಗ ಶ್ರೀಹರಿ ಹೇಳುತ್ತಾನೆ.

**'ಕಥಂ ವಿಸೃಜಸೇ ರಾಜನ್ ಭೀತಮಸ್ಮಿನ್ ಸರಿಜ್ಜಲೇ'** ಭಯಾನಕವಾದ ನದಿಯಲ್ಲಿ ನನ್ನ ಬಿಟ್ಟರೆ ನಾನು ಹೇಗೆ ಬದುಕಲಿ? ಎನ್ನುತ್ತಾನೆ. ಇದರ ಭಾವವಿಷ್ಟು. ಸಂಸಾರನದಿಯಲ್ಲಿ ಅನಾಯಾಸವಾಗಿ ಕೈಗೆ ಸಿಕ್ಕಿದ ಹರಿಯನ್ನೂ ಕೈಬಿಟ್ಟರೆ ಬದುಕುವ ಉಪಾಯವೇನು? ಎಂದು.

ಸಂಸಾರಸಾಗರದಲ್ಲಿ ಮುಳುಗಿದ ಸ್ವಚ್ಛನಾದ ಜೀವನಿಗೆ ಪ್ರಕೃತಿಯ ಕೆಸರಾದ ಕಾಮ ಕ್ರೋದಾಧಿಗಳು ಅಂಟಿಕೊಂಡಿವೆ. ಪಂಚಭೂತಗಳ ಕೆಸರಲ್ಲಿ ಜೀವನ ಸದ್ಗುಣಗಳು ಮುಚ್ಚಿವೆ. ಈ ಕೆಸರನ್ನು ತೊಳೆದು ಸ್ವಚ್ಛಮಾಡಿಕೊಳ್ಳಬೇಕಾದರೆ ನೀರಿಗೆ ಮತ್ಸ್ಯದ ಸಂಪರ್ಕವಾಗಬೇಕು. ಅಂದರೆ ಜೀವರಿಗೆ ಹರಿಯ ಸಂಪರ್ಕವಾಗಬೇಕು. ಮತ್ಸ್ಯನ ಧ್ಯಾನ–ಗಾನಗಳಿಂದ ಮಾತ್ರ ಆತ್ಮನಿಗಂಟಿದ ಕಶ್ಮಲವನ್ನು ತೊಳೆಯಲು ಸಾಧ್ಯ.

(ಮುಂದುವರಿಯುವುದು)


## ಶ್ರೀಮದ್ ಬ್ರಹ್ಮಸೂತ್ರಾನುವ್ಯಾಖ್ಯಾನ ಭಾಗ–3

## (ಕನ್ನಡಟೀಕಾ–ವಿಶೇಷಾಂಶ–ಮೂಲಾರ್ಥ ಸಹಿತ)

ವೇದಮೂರ್ತಿ, ವೇದಾಂತವಾಚಸ್ಪತಿ ಶ್ರೀ **ಅಗ್ರಹಾರ ನಾರಾಯಣತಂತ್ರಿ**ಯವರು ಅನುವಾದಿಸಿದ **ಶ್ರೀಮದ್ ಬ್ರಹ್ಮಸೂತ್ರಾನುವ್ಯಾಖ್ಯಾನ** (ಕನ್ನಡಟೀಕಾ–ವಿಶೇಷಾಂಶ–ಮೂಲಾರ್ಥ ಸಹಿತ) ಭಾಗ–3, ಗ್ರಂಥವು ಪುನರ್ಮುದ್ರಣಗೊಂಡು ಗ್ರಾಹಕರಿಗೆ ಲಭ್ಯವಾಗಿರುತ್ತದೆ.

ದೊರಕುವ ವಿಳಾಸ:

**1. ಗ್ರಂಥ ಮಾರಾಟ ಮಳಿಗೆ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು,**

**2. ಅಗ್ರಹಾರ ಮುದ್ರಣಾಲಯ, ರಥಬೀದಿ, ಉಡುಪಿ.**

ರಿಯಾಯಿತಿ ಬೆಲೆ ರೂ. 350/–


**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

(2ನೇ ಪುಟದಿಂದ)

ಸುರಿಸುತ್ತಿರುತ್ತದೆ. ಈ ಮೀನಿನ ಪಾಡೇ ವಿಷಯಗಳನ್ನು ಸೇವಿಸುವ ಭೋಗಿಯಪಾಡು. ಪಂಜರದಲ್ಲಿ ಸಿಲುಕಿದ ಹಕ್ಕಿಗಾದರೂ ತಾನು ಪಂಜರದಲ್ಲಿದ್ದೇನೆ ಅನ್ನುವ ಕಲ್ಪನೆ ಇದೆ. ಗೂಡಿನ ಬಾಗಿಲು ತೆರೆದರೆ ಸಿಕ್ಕಿದ ಅವಕಾಶವನ್ನು ತಪ್ಪಿಸಿಕೊಳ್ಳದೆ ಹೊರಗೆ ನುಣುಚಿ ಇಡೀ ಗಗನದಲ್ಲಿ ತನ್ನ ಸಾಮರ್ಥ್ಯವಿದ್ದಷ್ಟು ಹಾರಿ ವಿಹರಿಸುತ್ತದೆ. ಆದರೆ ಈ ಭೋಗಿಗೆ ಮಾತ್ರ ತಾನು ಗೂಡಿನಲ್ಲಿದ್ದೇನೆಂಬುದು ಗೊತ್ತಿಲ್ಲ. ಈ ಪಂಜರಕ್ಕೆ ಹೊಂದಾಣಿಕೆಯಾಗಿ ಸ್ಥಿರನಾಗಿದ್ದಾನೆ. ನವದ್ವಾರದ ಈ ದೇಹದ ಎಲ್ಲಾ ಬಾಗಿಲೂ ತೆರೆದಿದೆ. ಆದರೂ ಜೀವ ದೇಹಬಿಡಲು ತಯಾರಿಲ್ಲ. ವಿಷಕ್ಕೆ ತುಲ್ಯವಾದ ವಿಷಕ್ಕಿಂತಲೂ ತೀಕ್ಷ್ಣವಾದ ವಿಷಯಗಳ ದೋಷಗಳನ್ನು ಅನುಭವಿಸುತ್ತಿದ್ದರೂ ವಿಷಯಗಳಿಗೆ ಜೋತುಬಿದ್ದಿದ್ದಾನೆ ಈ ಭೋಗಿ. ಯೋಗಿಯು ಎಲ್ಲವನ್ನು ಬಲ್ಲವ. ಸಕಲವನ್ನು ಸಿದ್ದಿಸಿಕೊಂಡವ. ಗಾಳಿಯಂತೇ ಯೋಗಿಯು ಎಲ್ಲವನ್ನು ಮುಟ್ಟಿದರೂ ಕಿಂಚಿತ್ತು ಅಂಟಿಸಿಕೊಂಡಿಲ್ಲ. ಇದೇ ಯೋಗಿಯ ಅವಧೂತಚರ್ಯೆ. ಗಾಳಿಯ ಪಾಠ. ಧೂಳೀಪಟವಾಗದೆ ಗಾಳೀಪಟದಂತೆ ಗಗನವಿಡೀ ಹಾರಾಡುತ್ತಾನೆ ಈ ಯೋಗಿ. ನಮಗೂ ಗಾಳಿಯ ಪಾಠ. ಯೋಗಿಯ ಆದರ್ಶ ಯಾವುದನ್ನು ಮುಟ್ಟಬೇಡ. ಮುಟ್ಟಿದರೂ ಅಂಟಿಸಿಕೊಳ್ಳಬೇಡ. ★

---

(14ನೇ ಪುಟದಿಂದ)

ಅರ್ಧಾಂಗಿಯನ್ನಾಗಿಸಿಕೊಂಡ ರುರು–ಪ್ರಮದ್ವರೆಯರ ದಾಂಪತ್ಯ ಅಪೂರ್ವವಾದುದು. ಹಾವು ಕಚ್ಚಿ ಸತ್ತಳೆಂದು ಸರ್ಪಕುಲವನ್ನೇ ನಾಶಪಡಿಸಲು ರುರು ತೊಡಗಿದಂತೆ ಇಂದೂ ಇಬ್ಬರ ವೈಯಕ್ತಿಕ ಜಗಳ ಜನಾಂಗೀಯ ದ್ವೇಷಕ್ಕೆ ಕಾರಣವಾಗಿ ಸಮಾಜದ ನೆಮ್ಮದಿ ಹಾಳುಗೆಡುತ್ತಿರುವುದನ್ನೂ ಕಾಣುತ್ತಿದ್ದೇವೆ. ಅಹಿಂಸೆ ಎಲ್ಲರೂ ಅನುಸರಿಸಬೇಕಾದ ಪರಮಧರ್ಮ ಅದರಲ್ಲೂ ಬ್ರಾಹ್ಮಣ ಸೌಮ್ಯ ಸ್ವಭಾವದವನಾಗಿರಬೇಕು.

ತಮಾಷೆಗೆಂದು ಹೆದರಿಸಿದ ವಿಪ್ರ ಹಾವಾಗಿ ಹುಟ್ಟುವ ಅಪಾಯ ತಂದುಕೊಳ್ಳಬೇಕಾಯಿತು. ತಮಾಷೆಗಾಗಿಯೂ ಮತ್ತೊಬ್ಬರನ್ನು ಹೆದರಿಸಿ ಉದ್ವೇಗವುಂಟು ಮಾಡಬಾರದು. ಅಂತಹ ಕುಚೇಷ್ಟೆಗಳು ಎಂತಹ ಅನಾಹುತಕ್ಕೆ ಕಾರಣವಾಗುವುದೆಂಬುದನ್ನು ಈ ಕಥೆಯಿಂದ ನಾವು ಅರಿತುಕೊಳ್ಳಬೇಕು.

★

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

# ಜೀವನಯಜ್ಞ

ಸಂಕಲನ: ಸುನಂದಕೀ

## ಜೀವನ ಯಜ್ಞಾಂಗ ಸ್ಥೂಲಶರೀರ ಚಿಂತನ ಯಜ್ಞ

ಜೀವಿಯ ಭೌತಿಕ ದೇಹದಲ್ಲಿರುವ ಗುದ ಹಾಗೂ ವೃಷಣಗಳ ಮಧ್ಯದಲ್ಲಿಯೇ ನಾಡಿಗಳ ಮೂಲಸ್ಥಾನವಿರುವುದು. ಇದು ಮೂಲಾಧಾರವೆಂದೂ ಪ್ರಸಿದ್ಧವಾಗಿದೆ. ಅದನ್ನಾಶ್ರಯಿಸಿ, ಅಲ್ಲಿಂದ ಆರಂಭಿಸಿ ತಲೆಯಲ್ಲಿರುವ ಬ್ರಹ್ಮರಂಧ್ರದವರೆಗೂ ಹಬ್ಬಿಕೊಂಡಿರುವ ಹಾಗೂ ಎಲ್ಲ ನಾಡಿಗಳಿಗಿಂತ ಶ್ರೇಷ್ಠವಾದ 'ಸುಷುಮ್ನಾ' ಎಂಬ ನಾಡಿಯಿದೆ. ಅದು ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತಿ, ಬ್ರಹ್ಮನಾಡೀ ಎಂದು ಪಂಚಪ್ರಭೇದವುಳ್ಳದ್ದು. ಮಧ್ಯದಲ್ಲಿ ಬ್ರಹ್ಮನಾಡಿ, ಪಶ್ಚಿಮದಲ್ಲಿ ವಜ್ರಿಕಾನಾಡಿ, ಉತ್ತರದಲ್ಲಿ ಆರ್ಯಕಾನಾಡಿ, ಪೂರ್ವದಲ್ಲಿ ಪ್ರಕಾಶಿನೀ, ದಕ್ಷಿಣದಲ್ಲಿ ವೈದ್ಯುತಿ ಎಂಬ ನಾಡಿಗಳು ಇರುವುದು. ಹೀಗೆ ಪಂಚಪ್ರಭೇದವಾದ ಸುಷುಮ್ನಾನಾಡಿಗೆ ನಾಲ್ಕು ದಿಕ್ಕುಗಳಲ್ಲಿಯೂ ನೂರು ನಾಡಿಗಳು ಇರುವುದು. ಆ ನೂರು ನಾಡಿಗಳಲ್ಲಿ ವಜ್ರಿಕಾ, ಇಡಾ, ಧಾರಿಣೀ, ಪಿಂಗಳಾ ಎಂದು ನಾಲ್ಕು ನಾಡಿಗಳ ಪ್ರಧಾನಗಳು. ಪಶ್ಚಿಮದಲ್ಲಿ ವಜ್ರಿಕೆ, ಉತ್ತರದಲ್ಲಿ ಇಡಾ, ಪೂರ್ವಕ್ಕೆ ಧಾರಿಣೀ, ದಕ್ಷಿಣದಲ್ಲಿ ಪಿಂಗಳಾನಾಡಿಗಳಿವೆ. ಹೀಗೆ ಇರುವ ನೂರ ಒಂದು ನಾಡಿಗಳಲ್ಲಿ ಒಂದೊಂದು ನಾಡಿಯಲ್ಲೂ ನೂರು ನೂರು ಪ್ರತಿಶಾಖಾ ನಾಡಿಗಳು ಇರುತ್ತವೆ. ಪುನಃ ಅವುಗಳಲ್ಲಿ ಪ್ರತಿಶಾಖಾ ನಾಡಿಗಳು ಇರುತ್ತವೆ. ಈ ರೀತಿ ಎಲ್ಲವನ್ನೂ ಕೂಡಿಸಿದರೆ ಶರೀರದಲ್ಲಿ ಎಪ್ಪತ್ತೆರಡು ಸಾವಿರ ಶಾಖಾನಾಡಿಗಳೆಂದು ವೇದ್ಯವಾಗುವುದು.

ಹೀಗೆ ಸರ್ವ ಅವಯವಗಳ ಉತ್ಪತ್ತಿಯ ನಂತರ ಆರನೆಯ ತಿಂಗಳಲ್ಲಿ, ತಾಯಿಗೆ ತೊಂದರೆಯಾಗದಂತೆ ಗರ್ಭಕ್ಕೆ ಆವರಣ ರೂಪ ಸಂಪುಟವೆಂಬ 'ಜರಾಯು'ವಿನಿಂದ ನಿರುಚ್ಛ್ವಾಸವನ್ನು ಚೆನ್ನಾಗಿ ಬಂಧಿಸಿ ಗರ್ಭಸ್ಥಿತ ದೇಹಕ್ಕೆ ನಾಭಿಯಿಂದ ಆರಂಭಿಸಿ ತಾಯಿಯ ಶರೀರದ ಕರುಳಿನ ಸುಷಿರ ಪರ್ಯಂತ 'ಆಪ್ಯಾಯಿನೀ' ಎಂಬ ಹೆಸರಿನ ನಾಡಿಯು ಸ್ಥಿರವಾಗಿರುತ್ತದೆ. ಈ ನಾಡಿಯ ಮೂಲಕವೇ ತಾಯಿಯು ಭುಂಜಿಸಿದ ಅನ್ನಾದಿಗಳು ಹಾಗೂ ಕುಡಿದ ಹಾಲು, ನೀರು ಇತ್ಯಾದಿಗಳ ಸೂಕ್ಷ್ಮ ಭಾಗಗಳಿಂದ ಆಪ್ಯಾಯಿತದೇಹವುಳ್ಳ, ಗರ್ಭದಲ್ಲಿರುವ ಜೀವಿಯು ನಾರಿಕೇಳಫಲದಂತೆ ಕೋಶದ ಜೊತೆಯಲ್ಲಿಯೇ

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.

ಅಭಿವೃದ್ಧವಾಗುವುದು.

ಅನಂತರ ಏಳನೆಯ ತಿಂಗಳಿನಲ್ಲಿ ಭಗವಂತನು ಸುಂದರವಾದ ಕೈಕಾಲು ಮೊದಲಾದ ಅವಯವಗಳಿಂದ ಕೂಡಿದ, ಅತ್ಯಂತ ಮೃದುವಾದ, ಬಹಳ ಮನೋಹರವಾದ, ಸರ್ವವ್ಯವಹಾರೋಪಯುಕ್ತವಾದ ಸಕಲ ಕಲಾಕುಶಲವಾದ ತಿಳುವಳಿಕೆಗೆ ಸಾಧನಭೂತವಾದ ನಾಲ್ಕು ಲಕ್ಷ ಸಂಖ್ಯೆ ಯೋನಿಭೇದವುಳ್ಳ ಮನುಷ್ಯ ಶರೀರವನ್ನು ನಿರ್ಮಿಸಿ ಅದನ್ನು ನೋಡಿ, ಹಿಂದೆ ತನ್ನಿಂದಲೇ ನಿರ್ಮಿತವಾದ ಒಂಬತ್ತು ಲಕ್ಷ ಸಂಖ್ಯೆಯ ಜಲಚರಯೋನಿಗಳ ದೆಸೆಯಿಂದಲೂ, ಇಪ್ಪತ್ತು ಲಕ್ಷಸಂಖ್ಯೆ ಸ್ಥಾವರಯೋನಿಗಳ ದೆಸೆಯಿಂದಲೂ, ಹನ್ನೊಂದು ಲಕ್ಷ ಸಂಖ್ಯೆಯ ಕೃಮಿಯೋನಿಗಳೆ ದೆಸೆಯಿಂದಲೂ, ಹತ್ತು ಲಕ್ಷ ಸಂಖ್ಯೆಯ ಪಕ್ಷಿಯೋನಿಗಳ ದೆಸೆಯಿಂದಲೂ, ಮೂವತ್ತು ಲಕ್ಷ ಸಂಖ್ಯೆಯ ಪಶ್ವಾದಿ ಯೋನಿಗಳ ದೆಸೆಯಿಂದಲೂ ಅಧಿಕವಾದುದನ್ನು ನೋಡಿ ನಿರವಧಿಕವಾದ ಆನಂದವನ್ನು ಹೊಂದಿ ದೂರದಲ್ಲೇ ನಿಂತು ಅನನ್ಯಾಪೇಕ್ಷೆಯಿಂದಲೇ ಒಂದೇ ರೂಪದಿಂದಲೇ ಆಯಾಯಾ ಶಕ್ತಿ ಪ್ರೇರಣಾದಿ ವ್ಯಾಪಾರವನ್ನು ಮಾಡಲು ಸಮರ್ಥನಾದರೂ, ಯಾವುದಾದರೂ ಒಂದು ರೆಪ್ಪೆ ಹಾಕುವುದರಿಂದ, ಅನೇಕ ರೂಪಗಳ ಪ್ರಾದುರ್ಭಾವದಿಂದಲೇ ಜಗತ್ಸೃಷ್ಟಿಯಾಗುವುದರಿಂದ ಕೇವಲ ಲೀಲೆಯಿಂದಲೇ ಜೀವನದಲ್ಲಿ ಪ್ರವೇಶಿಸಿಯೇ ಅಲ್ಲಲ್ಲಿ ಅನೇಕ ರೂಪಗಳಿಂದಲೇ, ಅಲ್ಲಿಯೂ ಕೆಲವು ರೂಪಗಳಿಂದ ಧಾರಣ, ಕೆಲವು ರೂಪಗಳಿಂದ ಪೋಷಣವು, ಕೆಲವು ರೂಪಗಳಿಂದ ಚಲನಾದಿಗಳು, ಕೆಲವು ರೂಪಗಳಿಂದ ವಿವಿಧ ಕೆಲಸ ಮಾಡುವುದು, ಕೆಲವು ರೂಪಗಳಿಂದ ಭೋಜನವೂ ಮೊದಲಾದ ಕಾರ್ಯಗಳನ್ನು ಹೀಗೆ ಒಂದು ರೂಪ, ಎರಡು ರೂಪ, ಮೂರು ರೂಪ ಇತ್ಯಾದಿ ರೂಪಗಳಿಂದ ಮಾಡಿಸುವನು.

ಪುನಃ ದೇವತೆಗಳಲ್ಲಿ ಪರಮಾನುಗ್ರಹವನ್ನು ಮಾಡಿ ಅವರಿಂದಲೇ ಶರೀರದ ಸರ್ವವ್ಯಾಪಾರಗಳನ್ನೂ ಮಾಡಿಸಿ ಅಂತಹ ಉಪಾಸಕರಿಗೆ 'ವಿಷ್ಣು ಶಬ್ದಾರ್ಥವೆನಿಸಿದ ಸರ್ವಚೇಷ್ಟಯಿತೃತ್ವ, ವಿಶಿಷ್ಟಬಲವತ್ತ್ವವನ್ನು ಪ್ರಕಟಿಸಬೇಕೆಂದು ತನ್ನ ರೂಪಗಳನ್ನು ವ್ಯೂಹದಂತೆ ಅನೇಕ ಭಾಗವನ್ನಾಗಿಸಿ ಬ್ರಹ್ಮವಾಯುಗಳಿಂದ ಕೂಡಿಕೊಂಡು ಈ ಶರೀರವನ್ನು ಪ್ರವೇಶಿಸಿದನು.

ಮೊದಲಿಗೆ ಭಗವಂತ ಶರೀರದ ಧಾರಣೆಗಾಗಿ ಅನಿರುದ್ಧಾದಿ ಪಂಚರೂಪಗಳನ್ನು ಧರಿಸಿ ಬ್ರಹ್ಮವಾಯುಗಳಿಂದ ಸಹಿತನಾಗಿ ಆ ಜೀವ ಶರೀರದ ಅಂಗವಾದ 'ಪ್ರಪದ' (ಮುಂಗಾಲು) ದಿಂದ ಪ್ರವೇಶಿಸಿದನು. ಆದ್ದರಿಂದ ಆ ಎರಡೂ ಅಂಗಗಳಿಗೂ 'ಪ್ರಪದಾ' ಎಂಬ ಹೆಸರು ಬಂದಿತು. ಅನಂತರ ಭಗವಂತನು ತನ್ನ ಅನಿರುದ್ಧ ರೂಪವನ್ನು ಪ್ರಪದದಲ್ಲಿಟ್ಟು

**ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.**

ತಾನು ಊರ್ಧ್ವಮುಖವಾಗಿ ಹೋಗಿ ನಿಂತನು. ಭಗವಂತನು ಹಿಂದಿನ ಸ್ಥಳದಿಂದ ಗಮನ ಮಾಡಿದ್ದರಿಂದ ಆ ಎರಡು ಅಂಗಗಳು 'ಊರು'ಗಳೆಂದು ಕರೆಯಲ್ಪಟ್ಟವು. ಅಲ್ಲಿ ಪ್ರದ್ಯುಮ್ನನನ್ನು ನಿಲ್ಲಿಸಿ ಊರ್ಧ್ವಕ್ಕೆ ಹೋಗಿ ಅಲ್ಲಿ ನಿಂತು ವಾಯುದೇವರನ್ನು ಕುರಿತು ಸ್ಥಳವನ್ನು ವಿಸ್ತರಿಸು ಎಂದು ಆದೇಶಿಸಿದನು. ವಾಯುದೇವರು ಹಾಗೆಯೇ ಮಾಡಿದರು. ಎಲ್ಲಿ ವಾಯುದೇವರು ನಿಂತು ವಿಸ್ತಾರವನ್ನು ಮಾಡಿದರೋ ಅದು 'ಉದರ' ವೆಂಬ ನಾಮ ಪಡೆಯಿತು. ಅಲ್ಲಿ ಸಂಕರ್ಷಣರೂಪವನ್ನಿರಿಸಿ ಇನ್ನೂ ಸ್ವಲ್ಪ ಮೇಲಕ್ಕೆ ಹೋಗಿ ತನ್ನ ನಿವಾಸಕ್ಕೆ ವಿಸ್ತಾರವಾದ ಉರುಸ್ಥಾನವನ್ನು ಮಾಡೆಂದು ವಾಯುದೇವರಿಗೆ ಹೇಳಿದನು. ಅದು ವಾಯುದೇವರಿಂದ ವಿಸ್ತೃತವಾಯಿತು. ಆದ್ದರಿಂದ 'ಉರಸ್' ಎಂದೇ ಅದು ಪ್ರಸಿದ್ಧವಾಯಿತು. ಅದರ ಮಧ್ಯದಲ್ಲಿ ಹೃದಯವೂ ಆಯಿತು. ಅಲ್ಲಿ ವಾಸುದೇವನನ್ನು ಸ್ಥಾಪಿಸಿ ಅಲ್ಲಿಂದ ಮೇಲಕ್ಕೆ ಹೋಗಿ ಶಿರಸ್ಸಿನ ಬ್ರಹ್ಮನಾಡಿಯ ದ್ವಾರದ ಸ್ವಲ್ಪ ಕೆಳಪ್ರದೇಶದಲ್ಲಿ ದ್ವಾದಶದಳಯುಕ್ತ ಆರನೆಯ ಕಮಲದಲ್ಲಿ ನಾರಾಯಣರೂಪದಿಂದ ನಿಂತನು.

ಈ ರೀತಿ ಪ್ರಪದದಿಂದ ಪ್ರವೇಶಿಸಿ ವಾಸುದೇವನು ಅನಿರುದ್ಧಾದಿ ಪಂಚರೂಪದಿಂದ ಪಂಚಸ್ಥಾನಗಳಲ್ಲಿ ನಿಂತು ದೇಹವನ್ನು ಧರಿಸುವನು.

**(ಮುಂದುವರಿಯುವುದು)**

**(19ನೇ ಪುಟದಿಂದ)**

ತಿದ್ದುವುದಕ್ಕೆ ಹೋಗದೆ ಅವನ ದುಷ್ಟ ಸ್ವಭಾವಕ್ಕನುಗುಣವಾಗಿ ಅವನು ತನ್ನ ದಾಯಾದಿಗಳಿಗೆ ಅನ್ಯಾಯಮಾಡಿ ಅವರ ವಿರುದ್ಧವಾಗಿಯೇ ಕಾದಾಡಿ ಸಾಯುವಂತೆ ಮಾಡಿರುವನು. ಅವನಿಗೆ ಬೆಂಬಲಿಗರಾಗಿ ನಿಂತವರಿಗೂ ಅವರವರ ಸ್ವಭಾವದ ದುಷ್ಟತೆಗನುಗುಣವಾಗಿ ದಂಡನೆ ದೊರಕುವಂತೆ ಮಾಡಿರುವನು.

**ಜ್ವಲಂತ ಸಾಕ್ಷಿ–** ಹೀಗೆ ಶ್ರೀಕೃಷ್ಣಸಾಮರ್ಥ್ಯವಿದ್ದರೂ ಸಂಧಾನದ ಮಾರ್ಗವನ್ನು ಹಿಡಿಸದೆ ಯುದ್ಧವನ್ನೇ ಮಾಡಿಸಿ ಪಾಂಡವರಿಗೆ ಜಯಾದಿಗಳನ್ನೂ ದುರ್ಯೋಧನಾದಿಗಳಿಗೆ ನಾಶಾದಿಗಳನ್ನೂ ಕೊಡಿಸುವ ಮೂಲಕ ತಾನು ಆಯಾ ಜೀವರ ನಿತ್ಯಸ್ವಭಾವಕ್ಕನುಗುಣವಾಗಿ ಹೇಗೆ ನಡೆದುಕೊಳ್ಳುವೆನೆಂಬುದನ್ನು ಸಾಧಿಸಿಕೊಟ್ಟಂತಾದುದರಿಂದ ಶ್ರೀಮಧ್ವಗುರುಗಳು ಪ್ರಸ್ತುತಪಡಿಸಿರುವ 'ಸ್ವಭಾವವಾದಕ್ಕೂ ಜೀವತ್ರೈವಿಧ್ಯವಾದಕ್ಕೂ' ಜ್ವಲಂತಸಾಕ್ಷಿ ದೊರೆತಂತಾಗಿದೆ.

★

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.

# ಶೂನ್ಯವಾದ-ಮಾಯಾವಾದವು ಸರಿಯಲ್ಲ

-ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯರು ಬ್ರಹ್ಮಸೂತ್ರ ಭಾಷ್ಯದ ಪ್ರವಚನವನ್ನು ಮುಂದುವರಿಸುತ್ತಾ- ಶ್ರೀಮನ್ನಾರಾಯಣನು ಅನಂತಗುಣಪೂರ್ಣ, ಜಗತ್ಕಾರಣ ಎಂದಾಗ ಇದನ್ನು ನಿರಾಕರಿಸುವ, ವೇದವನ್ನೇ ಅಲ್ಲಗಳೆಯುವ ಮತ್ತೆ ಕೆಲವರು, ಮಾಧ್ಯಮಿಕರೆಂದು ಪ್ರಸಿದ್ಧರಾದ ಬೌದ್ಧರು 'ಶೂನ್ಯ'ವೊಂದನ್ನೇ ತತ್ವವೆನ್ನುತ್ತಾರೆ. ಇವರಲ್ಲಿ ಮತ್ತೆ ಎರಡು ಬಗೆ. ಕೆಲವರು ನೇರವಾಗಿಯೇ ಶೂನ್ಯವೆಂದು ಹೇಳುವವರು, ಕೆಲವರು ಇದೇ ಶೂನ್ಯವನ್ನೇ ವೇದಪ್ರತಿಪಾದ್ಯ ಬ್ರಹ್ಮನೆಂದು ಹೇಳುತ್ತಾ, ತಮ್ಮನ್ನು ವೇದವನ್ನು ಒಪ್ಪುವ ವೈದಿಕರೆಂದು ಬಣ್ಣಿಸಿಕೊಳ್ಳುತ್ತಾ ಕಡೆಗೆ ವೇದವನ್ನೂ ಸುಳ್ಳೆನ್ನುವ ಮುಸುಕು ಹಾಕಿಕೊಂಡ ಬೌದ್ಧರು. ಇವರು ಹೊರಗಿನಿಂದ ವೇದಾಂತಿಗಳು, ವೈದಿಕರು, ಒಳಗಿನಿಂದ ಅವೈದಿಕರಾದ ಬೌದ್ಧರು.

ಹೀಗೆ ಹೇಳಿದ ಕೂಡಲೆ ಸಿಡಿಮಿಡಿಗೊಂಡು ಎದ್ದು ನಿಲ್ಲುವವರು ಅದ್ವೈತಿಗಳೆಂದು ಪ್ರಸಿದ್ಧರಾದ ಮಾಯಾವಾದಿಗಳು. ನಮ್ಮನ್ನು ಪ್ರಚ್ಛನ್ನ ಬೌದ್ಧ (ಮುಸುಕು ಹಾಕಿಕೊಂಡ ಬೌದ್ಧ) ರೆನ್ನಬೇಡಿ. ನಮಗೂ ಬೌದ್ಧರಿಗೂ ಬಹಳ ವ್ಯತ್ಯಾಸವಿದೆ. ಬೌದ್ಧರು ವೇದವನ್ನು ಸಂಪೂರ್ಣವಾಗಿ ಸುಳ್ಳೆನ್ನುವವರು. ನಾವಾದರೋ ಮಂತ್ರ-ಬ್ರಾಹ್ಮಣ-ಉಪನಿಷತ್ ಎಂದು ಮೂರು ವಿಧವಾದ ವೇದದಲ್ಲಿ ಕೇವಲ ಮಂತ್ರ-ಬ್ರಾಹ್ಮಣಗಳನ್ನು ಮಾತ್ರ ಅತತ್ವಾವೇದಕ (ಸುಳ್ಳನ್ನು ಹೇಳುತ್ತಿದೆ) ಎಂದು ಹೇಳುತ್ತೇವೆ. ಉಪನಿಷದ್ ಭಾಗವನ್ನು ತತ್ವಾವೇದಕ (ಸತ್ಯವನ್ನು ತಿಳಿಸುತ್ತಿದೆ) ಎಂದು ಒಪ್ಪುತ್ತೇವೆ ಎಂದು ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ.

ಮಾಯಾವಾದಿಗಳಿಗಿಂತ ಬೌದ್ಧರೇ ಸ್ವಲ್ಪವಾದರೂ ಆಗಬಹುದು. ಏಕೆಂದರೆ ಅವರು ನೇರವಾಗಿಯೇ ವೇದವನ್ನು ಅಲ್ಲಗಳೆಯುತ್ತಾ ತಮ್ಮನ್ನು ಅವೈದಿಕರೆಂದು ಒಪ್ಪಿಕೊಳ್ಳುತ್ತಾರೆ. ಮಾಯಾವಾದಿಗಳು ಹೀಗಲ್ಲ. ಇವರು ತಾವು ವೇದವನ್ನು ಒಪ್ಪುವ ವೈದಿಕರೆಂದು ಹೇಳಿಕೊಳ್ಳುತ್ತಾರೆ. ಆದರೆ ವೇದಗಳು ಸುಳ್ಳು ಹೇಳುತ್ತಿವೆ ಎನ್ನುತ್ತಾರೆ. ಹಾಗಿದ್ದರೆ ಇವರು ಸುಳ್ಳು ಹೇಳುವ ವೇದವನ್ನು ಒಪ್ಪುವ ಸುಳ್ಳುಗಾರರಲ್ಲವೆ? ಒಂದೊಮ್ಮೆ ವೇದದ ಉಪನಿಷತ್ ಭಾಗವನ್ನು ಮಾತ್ರ ಸತ್ಯವೆಂದು ಒಪ್ಪುತ್ತೇವೆಂದು ಹೇಳುವವದಾದರೂ ಸಮಗ್ರ ವೇದವನ್ನು ಸತ್ಯ-ಸುಳ್ಳೆಂದು ತುಂಡುಮಾಡಿ ಅದರಲ್ಲಿ ಒಂದನ್ನು ಒಪ್ಪಿ ಮತ್ತೊಂದನ್ನು ನಿರಾಕರಿಸುವ ಇವರನ್ನು ವೈದಿಕರೆಂದು ಯಾರು ಒಪ್ಪಿಯಾರು?

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

## ಶೂನ್ಯವಾದಿ-ಮಾಯಾವಾದಿಗಳಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲ

ವಸ್ತುತಃ ಬೌದ್ಧರಿಗೂ ಮಾಯಾವಾದಿಗಳಿಗೂ ಯಾವ ವಿಷಯದಲ್ಲಿಯೂ ವ್ಯತ್ಯಾಸವಿಲ್ಲ. ಶೂನ್ಯವಾದಿಗಳಾದ ಬೌದ್ಧರು ನಿರಾಕಾರವಾದ ನಿರ್ವಿಶೇಷವಾದ ಯಾವ ಶೂನ್ಯವನ್ನು ಪರತತ್ವವೆಂದು ಹೇಳುತ್ತಾರೋ ಇಂತಹ ಶೂನ್ಯಕ್ಕಿಂತ ಸ್ವಲ್ಪವೂ ವಿಶೇಷವಿಲ್ಲದ ಪರತತ್ವವನ್ನು ಮಾಯಾವಾದಿಗಳು ಬ್ರಹ್ಮನೆನ್ನುತ್ತಾರೆ. ಕೇವಲ ಹೆಸರಿನಲ್ಲಿ ಮಾತ್ರ ವ್ಯತ್ಯಾಸ. ಅಳಿಯ ಅಲ್ಲ ಮಗಳ ಗಂಡ ಎಂದಂತೆ. ಉಳಿದಂತೆ ಎಲ್ಲವೂ ಇಬ್ಬರಿಗೆ ಸಮಾನವೇ ಆಗಿದೆ.

ಕೇವಲ ಪರತತ್ವದ ವಿಷಯದಲ್ಲಿ ಮಾತ್ರವಲ್ಲ. ಈ ಪ್ರಪಂಚದ ವಿಷಯದಲ್ಲಿಯೂ ಇವರಿಬ್ಬರಿಗೂ ಯಾವ ವ್ಯತ್ಯಾಸವೂ ಇಲ್ಲ. ಪ್ರಪಂಚವು ಪರತತ್ವದಲ್ಲಿ ಭ್ರಮೆಯಿಂದ ಕಾಣುವಂಥದು. ಇದರಲ್ಲಿ ಯಾವ ಧರ್ಮವೂ ಇಲ್ಲ ಎನ್ನುವುದು ಇಬ್ಬರ ಅಭಿಪ್ರಾಯ. ಉದಾಹರಣೆಗೆ ಹಗ್ಗದಲ್ಲಿ ಹಾವು ಕಂಡಂತೆ. ಮಸುಕಿರುವಾಗ ಒಬ್ಬ ವಕ್ರವಾಗಿ ಬಿದ್ದಿದ್ದ ಹಗ್ಗವನ್ನು ಕಂಡು ಹಾವೆಂದು ಚೀರಿದ. ವಸ್ತುತಃ ಅಲ್ಲಿ ಹಾವಿಲ್ಲ. ಅವನು ಭ್ರಮೆಯಿಂದ ಹಗ್ಗದಲ್ಲಿ ಹಾವನ್ನು ಕಾಣುತ್ತಿದ್ದಾನೆ. ಅಲ್ಲಿರುವ ಹಾವು ಸುಳ್ಳು. ಹಾಗೆಯೇ ಪರತತ್ವದಲ್ಲಿ ಸುಳ್ಳಾದ ಈ ಜಗತ್ತು ಭ್ರಮೆಯಿಂದ ಕಾಣುತ್ತಿದೆ ಎನ್ನುವುದು ಇಬ್ಬರ ಅಭಿಪ್ರಾಯ.

## ಶೂನ್ಯದಿಂದ ಸೃಷ್ಟಿಯಲ್ಲ

ಶೂನ್ಯವಾದಿಗಳಾದ ಬೌದ್ಧರು ಶೂನ್ಯವೇ ಜಗತ್ಕಾರಣ ಎನ್ನುತ್ತಾರೆ. ಅದು ಸರಿಯಲ್ಲ. ಏಕೆಂದರೆ ಅವರ ಪ್ರಕಾರ ಶೂನ್ಯವು ಅಸತ್ಯವಾಗಿದೆ. ಯಾವುದು ಅಸತ್ಯವೋ (ಸುಳ್ಳು) ಅದು ಯಾವುದಕ್ಕೂ ಕಾರಣವಾಗಲಾರದು. ಯಾವುದೇ ವಸ್ತುವು ಮತ್ತೊಂದು ವಸ್ತುವಿನ ಸೃಷ್ಟಿಗೆ ಕಾರಣವಾಗಬೇಕಾದರೆ ಅದು ಸತ್ಯವಾಗಿರಬೇಕು. ಉದಾಹರಣೆಗೆ ಕುಂಬಾರನಂತೆ. ಆತನ ಇರುವಿಕೆ ಸತ್ಯವಾಗಿರುವುದರಿಂದಲೆ ಅವನಿಂದ ಮಡಿಕೆಯ ನಿರ್ಮಾಣ ಸಾಧ್ಯವಾಗುತ್ತದೆ.

ನಾವು ಕುಂಬಾರ ಮಡಿಕೆಗೆ ಕಾರಣವಾದಂತೆ ಶೂನ್ಯ ಜಗತ್ಕಾರಣವೆಂದು ಒಪ್ಪುವುದಿಲ್ಲ. ಏಕೆಂದರೆ ಕುಂಬಾರನಿಗೆ ಮಣ್ಣು, ಚಕ್ರ ಮುಂತಾದ ಹೊರಗಿನ ವಸ್ತುಗಳ ಅಪೇಕ್ಷೆ ಇದೆ. ಇಲ್ಲಿ ಹಾಗಲ್ಲ. ಈ ಜಗತ್ತು ಶೂನ್ಯದ ಅಜ್ಞಾನದಿಂದ ಕಾಣಿಸಿಕೊಳ್ಳುತ್ತಿದೆ. ಹೇಗೆ ಮುತ್ತಿನ ಚಿಪ್ಪನ್ನು ಕಂಡು ಭ್ರಾಂತನಾದವನೊಬ್ಬ 'ಅದು ಬೆಳ್ಳಿ' ಎಂದು ಹೇಳುತ್ತಾನೆ. ಅವನಿಗೆ ಚಿಪ್ಪಿನ ಅಜ್ಞಾನದಿಂದ ಬೆಳ್ಳಿ ಕಾಣುತ್ತಿದೆ. ಹಾಗೆಯೇ ಶೂನ್ಯದ ಅಜ್ಞಾನದಿಂದ ಜಗತ್ತು ಕಾಣುತ್ತಿದೆ. ಹೀಗೆ ಶೂನ್ಯ ಜಗತ್ಕಾರಣವೆನ್ನುತ್ತೇವೆ ಎನ್ನುವುದು ಶೂನ್ಯವಾದಿಗಳ ಸಮರ್ಥನೆ. ಅಯ್ಯೋ, ಮೂರ್ಖನಾದ ಬೌದ್ಧ ಭಿಕ್ಷುವೇ, ಒಂದೊಮ್ಮೆ ಹೀಗೆ ಹೇಳಿದರೆ ಶೂನ್ಯವು ಜಗತ್ಕಾರಣವಾಗುವುದಿಲ್ಲ. ಭ್ರಮೆಗೆ ಅಧಿಷ್ಠಾನವಾಗುತ್ತದೆ. ನಿನಗೆ ಕಾರಣ ಹಾಗೂ ಅಧಿಷ್ಠಾನಗಳ

(35ನೇಪುಟಕ್ಕೆ)..

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**

ಭಾಗ–6

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

**ದೇಶತಃ ಕಾಲತೋವ್ಯಾಪ್ತಾಃ ವರ್ಣಾಸ್ಸರ್ವೇಪಿ ಶಾಶ್ವತಾಃ।**

**ವರ್ಣೇಷು ಸರ್ವಭಾಷಾಭಿವ್ಯಂಜಕಶಕ್ತಿಃ ಇಷ್ಯತೇ॥**

ಎಂಬ ಪ್ರಕಾಶಸಂಹಿತೆಯ ವಚನದಂತೆ ಶ್ರೀಹರಿಯು ಸರ್ವಭಾಷೆಗಳ ಅಭಿವ್ಯಕ್ತಿಗೆ ಬೇಕಾದ ಶಕ್ತಿಯನ್ನು ಸೃಷ್ಟಿಯ ಆದಿಯಲ್ಲಿ ವರ್ಣಗಳಿಗೆ ಕೊಡುವನು. ಕಾರಣ ಯಾವ ಭಾಷೆಯು ಮಾನವನಿಂದ ಕಲ್ಪಿತವಾದುದಲ್ಲ. ಎಲ್ಲ ಭಾಷೆಗಳೂ ಪರಮಾತ್ಮನ ಸತ್ಯಸಂಕಲ್ಪದಿಂದಲೇ ಅಭಿವ್ಯಕ್ತಗಳಾಗಿರುವುವು.

ಭಗವಂತನ ನಾಮಗಳಿಗಿರುವ ಪ್ರಾಶಸ್ತ್ಯ ಮಾಹಾತ್ಮ್ಯಗಳು ಎಲ್ಲ ಪುರಾಣಗಳಲ್ಲೂ ವಿಸ್ತಾರವಾಗಿ ಹೇಳಲ್ಪಟ್ಟಿವೆ. ಸ್ವತಃ ಭಾಗವತಾಚಾರ್ಯರು

**"ಶೃಣ್ವನ್ ಗೃಣನ್ ಸಂಸ್ಮರಯಂಶ್ಚ ಚಿಂತಯನ್**

**ನಾಮಾನಿ ರೂಪಾಣಿ ಚ ಮಂಗಲಾನಿ ತೇ।**

**ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋಃ**

**ಆವಿಷ್ಟ ಚಿತ್ತೋ ನ ಭವಾಯ ಕಲ್ಪ್ಯತೇ॥**

ಪರಮಾತ್ಮನ ನಾಮ ರೂಪಗಳನ್ನು ಕೇಳುತ್ತಾ–ಹಾಡುತ್ತಾ ನಿರಂತರ ಅದರಲ್ಲೇ ಆಸಕ್ತವಾದ ಚಿತ್ತವುಳ್ಳವನಿಗೆ ಸಂಸಾರಬಂಧವೇ ಇರಲಾರದು. ಎಂಬುದಾಗಿ ಹರಿನಾಮಕ್ಕೆ ಇರುವ ಶಕ್ತಿಯನ್ನು ವರ್ಣಿಸಿರುವರು. ಪುರಂದರದಾಸರೇ ಮೊದಲಾದ ಎಲ್ಲ ದಾಸವರೇಣ್ಯರು ಭಗವಂತನ ನಾಮಮಾಹಾತ್ಮ್ಯೆಯನ್ನು ಅನೇಕ ವಿಧದಿಂದ ಹಾಡಿ ಹೊಗಳಿದ್ದಾರೆ.

ಕಲಿಯುಗದೊಳು ಹರಿನಾಮವನೆನೆದರೆ
ಕುಲಕೋಟಿಗಳು ಉದ್ದರಿಸುವುವು
ಸುಲಭದ ಮುಕುತಿಗೆ ಸುಲಭವೆಂದೆನಿಸುವ
ಜಲರುಹನಾಭನ ನೆನೆ ಮನವೆ (ಪುರಂದರದಾಸರು)

ಕ್ಷೋಣಿಯೊಳಗೆ ಸಮಾನವಿಲ್ಲದ ನಾಮ
ದೀನನಾಗಿ ನಿಂದು ದಿನಕ್ಕೊಮ್ಮೆ ನೆನೆದರೆ
ಧ್ಯಾನ–ದಾನ–ಕರ್ಮ ಆವಾವಕಾಲಕ್ಕೆ

ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.

ತಾನೆಸೆಗಿದ ಫಲಕ್ಕೆ ನೂರುಮಡಿಯುಂಟು (ವಿಜಯದಾಸರು)

ಶ್ರೀಹರಿನಾಮ ಪಾವನವಾದ ಮಹಿಮೆ-ವಿಜಯದಾಸರು

ಇಳೆಯೇಶನ ನಾಮಾವಳಿಗಳ ಕೊನೆನಾಲಿಗೆಯಲಿ ನೆನೆದರೆ
ಹಲವು ಜನ್ಮದಲ್ಲಿದ್ದ ಹೊಲೆ ಪಾಪಗಳೆಲ್ಲ ಅಳಿವುವು ನಿಶ್ಚಯ

ನಾಮಂಗಳು ತಾ ನುಡಿಯದಿರೆ ಕಾಣರು ನಿರ್ವಾಣ

ವಿಜಯವಿಠ್ಠಲನ ಸಲೆನಾಮ ಸ್ಮರಿಸಲು ಸಂಸಾರ ಹರವಲ್ಲ

ನಾಮವೇ ಬಿಡದೆ ನೆನಿ ರೋಮ ರೋಮದ ದುರಿತನಾಶ

ಹರಿನಾಮಕ್ಕೆ ಸರಿಯಾದ ಕುರುಹ ನಾನರಿಯೇ

'ನಾ' ಎಂದು ನುಡಿಯಲು ನಾನಾ ನರಕನಾಶ
'ರಾ' ಎಂದು ಪೇಳಲು ರಾಯಪದವಕ್ಕು
'ಯ' ಎಂದು ವರ್ಣಿಸಲು ಎಲ್ಲ ಕಾಲದಲ್ಲಿ
ಶ್ರೇಯಸ್ಸಿನಲ್ಲಿ ಆನಂದಕ್ಕೆ-ಅಭಿವೃದ್ಧಿ
'ಣ' ಎಂದುದರ ಫಲವಾರು ಪೇಳುವರಯ್ಯ. (ವಿಜಯದಾಸರು)

ಶ್ರೀ ಜಗನ್ನಾಥದಾಸರಂತೂ ಈ ವಿಷಯವನ್ನು ವಿಸ್ತರಿಸುತ್ತಾ "ನಾಮಸ್ಮರಣ" ಎಂಬ ಹೆಸರಿನಿಂದ ಒಂದು ಸಂಧಿಯನ್ನೇ ರಚಿಸಿರುವರು. ಮಾಹಾತ್ಮ್ಯಜ್ಞಾನಪೂರ್ವಕ, ಪಶ್ಚಾತ್ತಾಪ-ಭಕ್ತಿಗಳಿಂದ ಉಚ್ಚರಿಸಲ್ಪಟ್ಟ ಹರಿನಾಮವು ತಾರಕವಾಗಿ ಕೈವಲ್ಯವೀವುದು ಎನ್ನುವಲ್ಲಿ ಯಾವ ಸಂದೇಹವೂ ಇಲ್ಲ. ಹರಿಕಾಥಾಮೃತಸಾರದ ಮೂವತ್ತೆರಡು ಸಂಧಿಗಳು ಭಗವಂತನ ನಾಮ-ರೂಪ-ಗುಣಗಳ ಮಾಹಾತ್ಮ್ಯ ಪ್ರತಿಪಾದಕಗಳಾಗಿವೆ.

(ಮುಂದುವರಿಯುತ್ತದೆ)

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**

ಪುರಾಣ ಪರಿಚಯ

ಭಾಗ–25

# ಶ್ರೀವಿಷ್ಣುಪುರಾಣ

–ಸ್ಫೂರ್ತಿ

ಚಂದ್ರನು ಪ್ರಚೇತಸರಿಗೆ ಕಂಡುಮುನಿಯ ಕಥೆಯನ್ನು ವಿವರಿಸುತ್ತಾ–ಪ್ರಮ್ಲೋಚೆಯ ಸಹವಾಸದಿಂದ ಸಂಪೂರ್ಣ ತಪಸ್ಸನ್ನು ಕಳೆದುಕೊಂಡ ಕಂಡುಮುನಿಯು ಪುರುಷೋತ್ತಮನಾದ ವಿಷ್ಣುವನ್ನು ಶರಣು ಹೊಂದಿದನು. ಆತನಲ್ಲಿಯೇ ಏಕಾಗ್ರವಾಗಿ ಮನವನ್ನು ನೆಲೆಗೊಳಿಸಿ ಎರಡೂ ಕೈಗಳನ್ನು ಮೇಲಕ್ಕೆತ್ತಿ ಭಕ್ತಿಯಿಂದ 'ಬ್ರಹ್ಮಪಾರ' ಸ್ತೋತ್ರವನ್ನು ಪಠಿಸುತ್ತಾ ಆರಾಧಿಸಿದನು.

**ಪ್ರಚೇತಸ ಊಚುಃ**

**ಬ್ರಹ್ಮಪಾರಂ ಮುನೇಃ ಶ್ರೋತುಮಿಚ್ಛಾಮಃ ಪರಮಂ ಸ್ತವಮ್ ।**
**ಜಪತಾ ಕಂಡುನಾ ದೇವೋ ಏನಾರಾಧ್ಯತ ಕೇಶವಃ ॥** (ವಿ.ಪು 1–15–54)

ಪ್ರಚೇತಸರು ಹೇಳಿದರು– ಯಾವ ಸ್ತೋತ್ರವನ್ನು ಜಪಿಸುತ್ತಾ ಕಂಡುಮುನಿಯು ಕ್ರೀಡಾದಿಗುಣ ವಿಶಿಷ್ಟನಾದ ಕೇಶವನನ್ನು ಆರಾಧಿಸಿ ಮೆಚ್ಚಿಸಿದನೋ ಅಂತಹ ಬ್ರಹ್ಮಪಾರವೆಂಬ ಶ್ರೇಷ್ಠವಾದ ಸ್ತೋತ್ರವನ್ನು ಕೇಳಲು ಇಚ್ಛಿಸುತ್ತೇವೆ.

**ಸೋಮ ಉವಾಚ**

**ಪಾರಂ ಪರಂ ವಿಷ್ಣುರಪಾರಪಾರಃ**
**ಪರಃ ಪರಾಣಾಮಪಿ ಪಾರಪಾರಃ ।**
**ಸ ಬ್ರಹ್ಮಪಾರಃ ಪರಪಾರಭೂತಃ**
**ಪರಃ ಪರೇಭ್ಯಃ ಪರಮಾರ್ಥರೂಪೀ ॥**

**ಸ ಕಾರಣಂ ಕಾರಣತಸ್ತತೋಽಪಿ**
**ತಸ್ಯಾಪಿ ಹೇತುಃ ಪರಹೇತುಹೇತುಃ ।**
**ಕಾರ್ಯೇಷು ಚೈವಂ ಸ ಹಿ ಕರ್ಮಕರ್ತೃ–**
**ರೂಪೈರಶೇಷೈರವತೀಹ ಸರ್ವಮ್ ॥**

**ಬ್ರಹ್ಮ ಪ್ರಭುರ್ಬ್ರಹ್ಮ ಸ ಸರ್ವಭೂತೋ**
**ಬ್ರಹ್ಮ ಪ್ರಜಾನಾಂ ಪತಿರಚ್ಯುತೋಽಸೌ ।**
**ಬ್ರಹ್ಮಾವ್ಯಯಂ ನಿತ್ಯಮಜಂ ಸ ವಿಷ್ಣು–**
**ರಪಕ್ಷಯಾದ್ಯೈರಖಿಲೈರಸಂಗೀ ॥**

ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.

**ಬ್ರಹ್ಮಾಕ್ಷರಮಜಂ ನಿತ್ಯಂ ಯಥಾಽಸೌ ಪುರುಷೋತ್ತಮಃ ।**

**ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥**

**ಏವಂ ವೈ ಬ್ರಹ್ಮಪಾರಾಖ್ಯಂ ಸಂಸ್ತವಂ ಪರಮಂ ಜಪನ್ ।**

**ಅವಾಪ ಪರಮಾಂ ಸಿದ್ಧಿಂ ಸ ಸಮಾರಾಧ್ಯ ಕೇಶವಮ್ ॥**

**(ಇಮಂ ಸ್ತವಂ ಯಃ ಪಠತಿ ಶೃಣುಯಾದ್ವಾಪಿ ನಿತ್ಯಶಃ ।**

**ಸ ಕಾಮದೋಷೈರಖಿಲೈರ್ಮುಕ್ತಃ ಪ್ರಾಪ್ನೋತಿ ವಾಂಛಿತಮ್) ।**

ಚಂದ್ರ ಹೇಳಿದ:– (ವಿ.ಪು. 1–15–55,59)

**ಪಾರಂ ಪರಂ ವಿಷ್ಣುರಪಾರಪಾರಃ–** ಈ ಸಂಸಾರ ಸಾಗರದ ಕಡೆಯ ತೀರವೆನಿಸಿದ ವಿಷ್ಣುವಿನ ಮಹಿಮೆಗೆ ಕಡೆಯಿಲ್ಲ. ಅಂದರೆ ಅಪಾರವಾದ ಸಂಸಾರವೆಂಬುದಕ್ಕೆ ತೀರವೆನ್ನಲು ಯಾರಾದರೂ ಇದ್ದರೆ ಅದು ವಿಷ್ಣು ಮಾತ್ರ. ಹೇಗೆ ಕಡಲಿನಲ್ಲಿ ಬಳಲಿ ಬೆಂಡಾಗಿದ್ದ ಜೀವನಿಗೆ ಒಮ್ಮೆ ತೀರ ದೊರೆತಾಗ ಪರಮಾನಂದವಾಗುತ್ತದೆಯೋ ಹಾಗೆಯೇ ಸಂಸಾರದ ಕಷ್ಟಕೋಟಲೆಗಳಲ್ಲಿ ಸಿಲುಕಿ ನಲುಕಿದ ಈ ಜೀವನಿಗೆ ಭಗವಂತನನ್ನು ಸೇರಿದಾಗ ಪರಮಾನಂದವಾಗುತ್ತದೆ. ಏಕೆಂದರೆ ಅವನ ಆನಂದಕ್ಕಾಗಲಿ, ಮಹಿಮೆಗಾಗಲಿ ಕಡೆಯೆಂಬುದೇ ಇಲ್ಲ. ಅವನು ಅಪಾರ ಮಹಿಮ. ಆದ್ದರಿಂದ ಅಪಾರವಾದ ಸಂಸಾರದಿಂದ ಪಾರಾಗಲು ಅಪಾರ ಮಹಿಮನಾದ ವಿಷ್ಣುವನ್ನೇ ಆರಾಧಿಸಬೇಕು.

**ಪರಃ ಪರಾಣಾಮಪಿ ಪಾರಪಾರಃ–**ದೇವತೆಗಳಿಗೂ ದೇವತೆಗಳಾದ ಬ್ರಹ್ಮರುದ್ರಾದಿಗಳನ್ನು ಭವಕಡಲಿನಿಂದ ಪಾರು ಮಾಡುವವನು ಈತನೇ. ಅಂದರೆ ಮೋಕ್ಷ ಕರುಣಿಸುವ ಶಕ್ತಿ ಮತ್ತ್ಯಾರಿಗೂ ಇಲ್ಲವೆಂಬುದು ಸ್ಪಷ್ಟವಾಯಿತು.

(31ನೇಪುಟದಿಂದ)..

ವ್ಯತ್ಯಾಸಗೊತ್ತಿಲ್ಲ. ಸ್ವಲ್ಪ ಗುರುಕುಲಕ್ಕೆ ಹೋಗಿ ಕಲಿತು ಬಾ.

'ಆಯಿತು. ನಾನು ಶೂನ್ಯವನ್ನು ಅಧಿಷ್ಠಾನವೆಂದೇ ಹೇಳುತ್ತೇನೆ' ಎಂದು ಬೌದ್ಧ ಹೇಳಿದರೆ ಅಸತ್ಯವಾದ ಶೂನ್ಯವು ಅಧಿಷ್ಠಾನವೂ ಆಗಲಾರದು. ಮುತ್ತಿನ ಚಿಪ್ಪು, ಸತ್ಯವಾಗಿದ್ದಾಗಲೆ ಅದನ್ನು ಕಂಡಾಗ ಬೆಳ್ಳಿಯ ಭ್ರಮೆ ಬರಲು ಸಾದ್ಯ. ಹಾಗೆಯೇ ಶೂನ್ಯ ಸತ್ಯವಾಗಿದ್ದಾಗಲೆ ಅದರಲ್ಲಿ ಈ ಜಗತ್ತು ಭ್ರಮೆಯಿಂದ ಕಾಣಬಹುದು. ಆಗ ಈ ಭ್ರಮೆಗೆ ಶೂನ್ಯವು ಅಧಿಷ್ಠಾನವೆಂದು ಒಪ್ಪಬಹುದು. ಶೂನ್ಯವೇ ಅಸತ್ತಾಗಿರುವಾಗ ಅದರಲ್ಲಿ ಜಗತ್ತಿನ ಭ್ರಮೆ ಬರಲು ಸಾಧ್ಯವೇ ಇಲ್ಲ. ಆದ್ದರಿಂದ ಶೂನ್ಯವು ಅಧಿಷ್ಠಾನವೂ ಆಗಲಾರದು. ಹೀಗೆ ಶೂನ್ಯದಿಂದ ಜಗತ್‌ಸೃಷ್ಟಿಯಾಯಿತೆಂಬ ಬೌದ್ಧರ ವಾದವೂ ಸರಿಯಿಲ್ಲ.

ಮುಂದುವರಿಯುತ್ತದೆ.....

**ಹಸಿದವರಿಗೆ ಅನ್ನವನ್ನು ನೀಡಿ.**

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

## ಪಕ್ಷಿಗಳು ಉಲಿದವು

ವಿಪುಲಾಸ್ವಾನ ಎಂಬೊಬ್ಬ ಋಷಿಗೆ ಸುಕೃಷ್ಟ ಮತ್ತು ತುಂಬುರು ಎಂಬಿಬ್ಬರು ಮಕ್ಕಳು ಅವರಲ್ಲಿ ಸುಕೃಷ್ಟನಿಗೆ ನಾಲ್ಕು ಮಕ್ಕಳು. ಧರ್ಮಿಷ್ಟನಾದ ಸುಕೃಷ್ಟನ ಧರ್ಮಶೀಲತೆಯನ್ನು ಪರಿಶೀಲತೆಯನ್ನು ಪರೀಕ್ಷಿಸಲೋಸುಗ ದೇವೇಂದ್ರ ಮುದಿ ಹದ್ದಿನ ರೂಪದಲ್ಲಿ ಬಂದ. ಮಹಾಕಾಯನಾಗಿ ಜೀರ್ಣಾಂಗನಾಗಿ ನಡುಗುವ ಶರೀರವುಳ್ಳವನಾಗಿ, ಹಸಿವು ಬಾಯಾರಿಕೆಗಳಿಂದ ತೊಳಲಾಡುತ್ತ ಬಂದಿರುವ ಪಕ್ಷಿ ರೂಪದ ಇಂದ್ರನನ್ನು ಋಷಿ ಸುಕೃಷ್ಟ ಸತ್ಕರಿಸಿದ. **"ಅತಿಥಿ ದೇವೋಭವ"** ಇದು ಅವನ ವ್ರತ. ನಿನ್ನ ಬಯಕೆಯೇನೆಂದು ಋಷಿ ಕೇಳಿದಾಗ ಪಕ್ಷಿ ರೂಪದ ಇಂದ್ರ ಹೇಳಿದ, ನಾನು ಮೇರುವಿನ ಬಳಿ ಹಾರುತ್ತಿದ್ದಾಗ ಗರುಡನ ಕೇವಲ ಶ್ವಾಸಾಘಾತದಿಂದ ತಾಡಿತನಾಗಿ ಮೂರ್ಛಿತನಾಗಿ ಇಲ್ಲೇ ಪಕ್ಕದಲ್ಲಿ ಬಿದ್ದಿದೆ. ಏಳು ದಿವಸ ಭೋಧ ಇದ್ದಿಲ್ಲ. ಇಂದು ಪ್ರಜ್ಞೆ ಬಂದಿದೆ. ಹಸಿವಿನಿಂದ ಕಂಗೆಟ್ಟಿದ್ದೇನೆ. ತಿನ್ನುವುದಕ್ಕೆ ನನಗೆ ನರಮಾಂಸವೇ ಆಗಬೇಕು. ಅದರ ಸಂಪಾದನೆಗೆ ಅಶಕ್ತನಿದ್ದೇನೆ. ನಿನ್ನಿಂದದನ್ನು ಬೇಡುತ್ತಿದ್ದೇನೆ ಎಂದಾಗ, ಅತಿಥಿಗಳಲ್ಲಿ ದೇವರನ್ನು ಕಾಣುತ್ತಿದ್ದ ಋಷಿ ತನ್ನ ಮಕ್ಕಳಿಗೆ ಆಜ್ಞಾಪಿಸಿದ, ನೀವು ಈ ಹಕ್ಕಿಯ ಆಹಾರವಾಗಬೇಕು. ಅದಕ್ಕಾಗಿ ಪ್ರಾಣತ್ಯಾಗ ಮಾಡಬೇಕು. ತಂದೆಯಾದ ನನ್ನ ವ್ರತವನ್ನು ಈಡೇರಿಸುವುದರಲ್ಲಿ ಮಕ್ಕಳಾದ ನಿಮ್ಮ ತ್ಯಾಗದ ಅವಶ್ಯಕತೆಯಿದೆ. ಇದರಿಂದ ಪೈತೃಕ ಋಣದಿಂದ ಮುಕ್ತಿಯನ್ನು ಪಡೆಯಬಹುದು ಎಂದಾಗ, ಪಿಶಿತಾಶಿಯಾದ ಕ್ಷುದ್ರ ಗೃಧ್ರದ ಹಸಿವನ್ನು ತಣಿಸುವುದಕ್ಕೆ ಬಹುಜನ್ಮ ಪುಣ್ಯಸಾಧ್ಯವಾದ ಈ ಸಾಧನಾಶರೀರವನ್ನು ತ್ಯಾಗ ಮಾಡುವುದು ಹುಚ್ಚುತನ **"ಜೀವನ್ ಭದ್ರಾಣಿ ಅವಾಪ್ನೋತಿ ಜೀವನ್ ಪುಣ್ಯಂ ಕರೋತಿ ಚ"** ಎಂಬುದಾಗಿ ಮಕ್ಕಳು ತಮ್ಮ ನಿಲುವನ್ನು ಸಮರ್ಥಿಸಿದಾಗ, ತಂದೆ ಮಕ್ಕಳಿಗೆ ಹೀಗೆಂದ ಪಿತೃವಾಕ್ಯವನ್ನು ಪಾಲಿಸದ ನೀವು ಈ ಜೀವನದಿಂದ ವಂಚಿತರಾಗಿ ಗೃಧ್ರ ಪಕ್ಷಿಗಳ ಜನ್ಮವನ್ನು ತಾಳಿ ಎಂದು ಶಪಿಸಿ, ಬೇಡಿದ ಅತಿಥಿಯ ಆಹಾರಕ್ಕೆ ತನ್ನನ್ನೇ ಸಮರ್ಪಿಸಿದ. ಗೃಧ್ರ ಪಕ್ಷಿಯೇ ಸ್ವೀಕರಿಸು ನನ್ನೀ

**ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.**

ಕಳೇವರವನ್ನು ಎಂದ. ಆಗ ಹದ್ದಿನ ರೂಪದ ಇಂದ್ರ ಹೆಣದ ಮಾಂಸವನ್ನಷ್ಟೇ ತಿನ್ನ ಬಲ್ಲೆ ಎಂದಾಗ ಸುಕೃಷ್ಣ ಮುನಿ ತಾನು ಯೋಗದಿಂದ ಅತ್ಮೋಪಕ್ರಮವನ್ನು ಮಾಡ ಹೊರಟಾಗ ದೇವೇಂದ್ರ ನಿಜರೂಪದಿಂದ ಕಾಣಿಸಿಕೊಂಡು ಆ ಋಷಿಯನ್ನು ಅಭಿನಂದಿಸಿದ, ನಿನ್ನ ಧರ್ಮಶೀಲತೆಯನ್ನು ಪರೀಕ್ಷಿಸುವ ಉದ್ದೇಶ ಸಫಲವಾಯಿತೆಂದು ಅವನನ್ನು ಅನುಗ್ರಹಿಸಿ ನಿಜಲೋಕಕ್ಕೆ ಹೊರಟ. ಶಪ್ತರಾದ ಮಕ್ಕಳು ತಂದೆಯಲ್ಲಿ ಕ್ಷಮೆಯಾಚಿಸಿದರು. ಅಸ್ಥಿ, ಮಾಂಸ, ಚರ್ಮಗಳ ಮುದ್ದೆಯಾದ ಅಸ್ಥಿರವಾದ ಶರೀರದಲ್ಲಿ ಮೋಹವಿಟ್ಟು ನಿಮ್ಮ ಆಜ್ಞೆಯನ್ನು ಉಲ್ಲಂಘಿಸಿದೆವು. ಈ ಋಷಿ ದೇಹವನ್ನು ತೊರೆದು ತಾಮಸ ಯೋನಿಯಲ್ಲಿ ಹುಟ್ಟಿ ಬವಣೆಯನ್ನು ಅನುಭವಿಸುವ ಪಾಡು ಅನಿವಾರ್ಯವೇ ಎಂದು ಮರುಗಿದಾಗ ತಂದೆ ಹೇಳಿದ. ನನ್ನ ಮಾತು ಸುಳ್ಳಾಗದು ತಿರ್ಯಗ್ಯೋನಿಯಲ್ಲಿ ಹುಟ್ಟಿದರೂ ನಿಮ್ಮ ಜ್ಞಾನ ಮಾಸದು. ಹೀಗೆ ಸುಕೃಷ್ಣ ಮುನಿಯಿಂದ ಶಪ್ತರಾಗಿ ಹಕ್ಕಿಗಳಾಗಿರುವ ಆ ಋಷಿ ಕುಮಾರರೇ ನಾವು ಎಂದು ತಮ್ಮ ವೃತ್ತಾಂತವನ್ನು ಹೇಳಿ ಶಮೀಕರಿಗೆ ಕೃತಜ್ಞತೆಯನ್ನು ಅರ್ಪಿಸಿ ವಿಂಧ್ಯೆಯತ್ತ ಹಾರಿದವು.

ಈ ರೀತಿ ಪಕ್ಷಿಗಳ ವೃತ್ತಾಂತವನ್ನು ಜೈಮಿನಿಗೆ ಅರುಹಿ ಮಾರ್ಕಂಡೇಯರು ಮಾಧ್ಯಾಹ್ನಿಕಕ್ಕೆ ತೆರಳಿದರು.

**ಹಕ್ಕಿಗಳಿಂದ ಋಷಿಗಳಿಗೆ ಪ್ರವಚನ**

ಹೀಗೆಂದು ಮಾರ್ಕಂಡೇಯರಿಂದ ನಿರ್ದಿಷ್ಟವಾದ ಜೈಮಿನಿಗಳು ಪಕ್ಷಿಗಳ ಸನಿಹಕ್ಕೆ ಬಂದರು. ತಮ್ಮ ಸನ್ನಿಧಾನದಿಂದಲೇ ಆ ವಾತಾವರಣದಲ್ಲಿ ಪ್ರಸನ್ನತೆಯನ್ನು ಸೃಷ್ಟಿಸಿರುವ ಹಕ್ಕಿಗಳಲ್ಲಿ ತಮ್ಮ ಸಂದೇಹವನ್ನು ನಿವೇದಿಸಿದರು. ಹಕ್ಕಿ ರೂಪದಿಂದ್ದಿದ್ದರೂ ತಂದೆಯ ಅನುಗ್ರಹದಿಂದ ಮೇಧಾವಿಗಳಾಗಿದ್ದ ಗೃಧ್ರ ಪಕ್ಷಿಗಳು ಜೈಮಿನಿಗಳ ನಾಲ್ಕು ಪ್ರಶ್ನೆಗಳನ್ನು ಅವಧರಿಸಿ ಉತ್ತರವನ್ನಿತ್ತರು.

**(ಮುಂದುವರಿಯುವುದು)**

***ತಿದ್ದುಪಡಿ:*** *ಕಳೆದ ಸೆಪ್ಟಂಬರ್ ತಿಂಗಳ ಸಂಚಿಕೆಯಲ್ಲಿ ವಿ॥ ರಾಮವಿಠ್ಠಲಾಚಾರ್ಯರ 'ಭಾರತಭಾವದರ್ಪಣ' ಎಂಬ ಶೀರ್ಷಿಕೆಯ ಲೇಖನದಲ್ಲಿ 'ಪುಲೋಮೆ' ಎಂಬ ಹೆಸರಿನ ಬದಲು 'ಪ್ರಲೋಮೆ' ಎಂದು ತಪ್ಪಾಗಿ ಮುದ್ರಿಸಲಾಗಿದ್ದು ಇದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇವೆ.* ***–ಸಂಪಾದಕ***

**ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ**

ಮುಖಪುಟಲೇಖನ

# ಸ್ವಮೂರ್ತಿ ಗಣಮಧ್ಯಗಃ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ನಾರಾಯಣ ಅಷ್ಟಾಕ್ಷರ ಮಂತ್ರವು ಎಲ್ಲಾ ವೈದಿಕ ಮಂತ್ರಗಳಿಗೆ ಮೂಲವಾದ್ದರಿಂದ ಈ ಮಂತ್ರಕ್ಕೆ ಮೂಲಮಂತ್ರ ಎಂದು ಹೆಸರು. ಈ ಮಂತ್ರದ ಎಂಟು ಅಕ್ಷರಗಳು ಓಂಕಾರದ ಎಂಟು ಅಕ್ಷರಗಳಿಂದ ಅಭಿವ್ಯಕ್ತವಾದುದು ಎಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

**ನಾರಾಯಣಾಷ್ಟಾಕ್ಷರಶ್ಚ ತಾರಾಷ್ಟಾಕ್ಷರಭೇದವಾನ್।**

ನಾರಾಯಣಾಷ್ಟಾಕ್ಷರದ ಎಂಟು ವರ್ಣಗಳಿಂದ ಭಗವಂತನ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಎಂಟು ರೂಪಗಳು ಪ್ರತಿಪಾದ್ಯವಾಗಿವೆ. **ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿತ್ರಿಗುಣಾತ್ತುನಃ। ವೇದಮಾತಾತು ಗಾಯತ್ರೀ** ಎಂಬಲ್ಲಿ ನಾರಾಯಣಾಕ್ಷರವನ್ನು ಮೂರಿ ಬಾರಿ ಹೇಳಿದಾಗ ವೇದಮಾತೆಯಾದ ಗಾಯತ್ರೀಮಂತ್ರವು ನಿಷ್ಪನ್ನವಾಗುತ್ತದೆ ಎನ್ನುತ್ತಾರೆ. ಆಕಾರಣದಿಂದಲೇ ಶ್ರೀಮಧ್ವಾಚಾರ್ಯರು ಸದಾಚಾರಸ್ಮೃತಿಯಲ್ಲಿ **ಗಾಯತ್ರ್ಯಾಃ ತ್ರಿಗುಣಂ ವಿಷ್ಣುಂ ಧ್ಯಾಯನ್ ಅಷ್ಟಾಕ್ಷರಂ ಜಪೇತ್।** ಎಂಬುದಾಗಿ ಗಾಯತ್ರಿಮಂತ್ರದ ಮೂರು ಪಟ್ಟು ಅಷ್ಟಾಕ್ಷರಮಂತ್ರಜಪವನ್ನು ಮಾಡಬೇಕೆಂದು ತಿಳಿಸಿದ್ದಾರೆ. ಅದರ ಅರ್ಥ ಗಾಯತ್ರಿಗೂ ಅಭಿವ್ಯಂಜಕ ಅಷ್ಟಾಕ್ಷರಮಂತ್ರವೆಂದು ತಿಳಿಯುತ್ತದೆ. ದೈವೀಗಾಯತ್ರೀಛಂದಸ್ಸಿನಲ್ಲಿರುವ ಈ ಮಂತ್ರಕ್ಕೆ ಋಷಿ ಹಾಗೂ ದೇವತೆ ನಾನೇ ಎಂದು ಭಗವಂತನೇ ತಿಳಿಸಿದ್ದಾನೆ.

ಉದಯಿಸುತ್ತಿರುವ ಸೂರ್ಯನಂತೆ ಕಾಂತಿಯಿಂದ ಕೂಡಿದ ಸಚ್ಚಿದಾನಂದ ಸ್ವರೂಪನಾದ ಚಕ್ರ–ಶಂಖ–ಗದಾ–ಪದ್ಮಧಾರಿಯಾದ ಶ್ರೀಲಕ್ಷ್ಮೀ–ಧರೆಯರಿಂದ ಆಲಿಂಗಿತನಾದ ತನ್ನ ವಿಶ್ವಾದಿ ಎಂಟು ಮೂರ್ತಿಗಳ ಮಧ್ಯದಲ್ಲಿರುವ ಬ್ರಹ್ಮ–ವಾಯು–ರುದ್ರ–ಶೇಷ–ಗರುಡ–ಇಂದ್ರಾದಿಗಳಿಂದ ಸೇವಿಸಲ್ಪಡುತ್ತಿರುವ ಅಪರಿಮಿತ ಶಕ್ತಿಯುಳ್ಳ ಭಗವಂತನು ಈ ಮಂತ್ರದಿಂದ ಪ್ರತಿಪಾದ್ಯನಾಗಿದ್ದಾನೆ. ಈ ಮಂತ್ರ ಜಪಿಸುವಾಗ ಇದೇ ಭಗವದ್ರೂಪವನ್ನು ಧ್ಯಾನಿಸಬೇಕೆಂದು ಭಗವಂತನೇ ತಿಳಿಸಿದ್ದಾನೆ.

ನಾರಾಯಣ ಎಂಬ ಶಬ್ದಕ್ಕೆ ಅಸಂಖ್ಯಾತ ಅರ್ಥಗಳಿವೆ. ಶ್ರೀಟೀಕಾರಾಯರು ಅನುವ್ಯಾಖ್ಯಾನದ ಮಂಗಳಾಚಾರಣೆಗೆ ವ್ಯಾಖ್ಯಾನಮಾಡುತ್ತಾ ನಾರಾಯಣಶಬ್ದಕ್ಕೆ ಕೆಲವು

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ

ಅರ್ಥಗಳನ್ನು ತಿಳಿಸಿದ್ದಾರೆ.

**ಅರವಿರುದ್ಧಾಃ ನಾರಾಃ ನಾರಾಣಾಂ ಅಯನಾತ್ ನಾರಾಯಣಃ** ಎಂದರೆ ಅರ=ದೋಷಗಳು, ದೋಷಗಳಿಗೆ ವಿರುದ್ಧವಾದವು ಅಂದರೆ ಗುಣಗಳು ಎಂದು ಅರ್ಥ. ಆ ಗುಣಗಳಿಗೆ ಅಯನಾತ್=ಆಶ್ರಯನಾದ್ದರಿಂದ ವಿಷ್ಣುವಿಗೆ ನಾರಾಯಣ ಎಂದು ಹೆಸರು.

ನಾರಾ ಎಂದರೆ ಜೀವರಿಗೆ ಅಧಿಪತಿ ಎಂದು ಅರ್ಥ. ಜೀವೋತ್ತಮರಾದ ವಾಯುದೇವರು ಎಂದು ಅರ್ಥ. ಆ ವಾಯುದೇವರಿಗೆ ಆಶ್ರಯನಾದ್ದರಿಂದ ವಿಷ್ಣುವಿಗೆ ನಾರಾಯಣ ಎಂಬ ಹೆಸರು.

ನಾರಾಯಣ ಎಂಬ ಶಬ್ದಕ್ಕೆ ನೂರು ಅರ್ಥಗಳನ್ನು ತಿಳಿಸಿಕೊಟ್ಟ ಮಂತ್ರಾಲಯ ಮಠಾಧೀಶರಾದ ಶ್ರೀವಿಜಯೀಂದ್ರ ತೀರ್ಥರು ಹಾಗೂ ಅವರ ಗೆಳೆಯರಾದ ಅದ್ವೈತಸಿಂಹರಾದ ಅಪ್ಪಯ್ಯದೀಕ್ಷಿತರು ನಿತ್ಯ ವಾಕ್ಯಾರ್ಥವನ್ನು ನಡೆಸುತ್ತಿದ್ದರು. ಆಗ ಅಪ್ಪಯ್ಯ ದೀಕ್ಷಿತರು ಎಲ್ಲ ವಿಷ್ಣುವಾಚಕ ಶಬ್ದಗಳನ್ನು ರುದ್ರನಲ್ಲಿ ಸಮನ್ವಯ ಮಾಡಿದರು. ಆಗ ಶ್ರೀವಿಜಯೀಂದ್ರತೀರ್ಥರು ನಾರಾಯಣ ಶಬ್ದವನ್ನು ರುದ್ರನಲ್ಲಿ ಸಮನ್ವಯಮಾಡುವಂತೆ ಹೇಳಿದರು. ಅಪ್ಪಯ್ಯದೀಕ್ಷಿತರು ನಾರಾಣಾಂ ಅಯನಂ ನಾರಾಯಣಃ ಅಂದರೆ ಮನುಷ್ಯನಿಗೆ ಆಶ್ರಯನಾದ್ದರಿಂದ ರುದ್ರನು ನಾರಾಯಣ ಶಬ್ದ ವಾಚ್ಯನಾಗುತ್ತಾನೆ ಎಂದರು. ಆಗ ಶ್ರೀವಿಜಯೀಂದ್ರರು ಆಯನ ಎಂಬಲ್ಲಿನ ನಕಾರಕ್ಕೆ ಣಕಾರ ಹೇಗೆ ಬಂತು ಎಂದು ಕೇಳಿದರು. ಅಪ್ಪಯ್ಯದೀಕ್ಷಿತರಿಗೆ ಏನು ತೋಚದಾಯಿತು. ಏಕೆಂದರೆ ವೈಯ್ಯಾಕರಣರು ಹೇಳುವ ರೀತಿಯಲ್ಲಿ ರೂಢವಾದ ಹೆಸರಿನಲ್ಲಿ ಮಾತ್ರ ನಕಾರಕ್ಕೆ ಣಕಾರವು ಬರುತ್ತದೆ. ನಾರಾಯಣ ಎಂಬ ಶಬ್ದವು ರೂಢಿಯಲ್ಲಿರುವುದು ವಿಷ್ಣುವಿನಲ್ಲಿ ಮಾತ್ರ. ರುದ್ರನಲ್ಲಿ ರೂಢಿಯಲಿಲ್ಲ. ಆದ್ದರಿಂದ ವಿಷ್ಣುವಿನಲ್ಲಿ ನಾರಾಯಣ ಶಬ್ದವನ್ನು ಸಮನ್ವಯಮಾಡುವಾಗ ಮಾತ್ರ **'ನ'** ಕಾರಕ್ಕೆ **'ಣ'** ಕಾರವು ಬರುತ್ತದೆ. ಆದರೆ ರುದ್ರನಲ್ಲಿ ಸಮನ್ವಯ ಮಾಡುವಾಗ ನಕಾರಕ್ಕೆ ಣಕಾರವು ಬರುವುದಿಲ್ಲ. ಅದನ್ನೆ ಶ್ರೀವಿಜಯೀಂದ್ರರು ಹೇಳಿದಾಗ ಅಪ್ಪಯ್ಯದೀಕ್ಷಿತರು ಏನೂ ಹೇಳದೆ ಮನೆಗೆ ಹೋಗಿ ಮಲಗಿಕೊಂಡರು. ಅದನ್ನು ಕಂಡು ಅವರ ಮಗಳು ಮಲಗಿರಲು ಕಾರಣವೇನು ಎಂದು ತಂದೆಯಲ್ಲಿ ಕೇಳಿದಳು. ಹೊಟ್ಟೆನೋವಿನಿಂದಾಗಿ ಮಲಗಿದ್ದೇನೆ ಮಗಳೇ ಎಂದು ಹೇಳುತ್ತಾರೆ. ಮಗಳು ಔಷದ ತರಲೇ ಎಂದು ಕೇಳಿದಾಗ ತಂದೆ ಬೇಡ ಮಗಳೇ, **"ಣತ್ವಂಬಾಧತೇ"** ಎಂದು ಹೇಳುತ್ತಾರೆ. ಅಂದರೆ ನಕಾರಕ್ಕೆ ಣಕಾರವು ಹೇಗೆ ಬಂತು ಎಂದು ತಿಳಿಯುತ್ತಿಲ್ಲ. ನಂತರ ತುಂಬ ಯೋಚಿಸಿದಾಗ ಅಪ್ಪಯ್ಯದೀಕ್ಷಿತರಿಗೆ ಇನ್ನೊಂದು ರೀತಿಯಾದ ಉಪಾಯವು ಹೊಳೆಯುತ್ತದೆ. ಅದನ್ನು ಮರುದಿನ ಶ್ರೀವಿಜಯೀಂದ್ರರಲ್ಲಿ ಹೇಳುತ್ತಾರೆ. ಅದೇನೆಂದರೆ

**ಶ್ರೀಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ**

**ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ। ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣೀ ನಮೋಸ್ತುತೇ।** ಎಂಬ ಗೌರೀ ಪ್ರಾರ್ಥನೆಯಲ್ಲಿ ಗೌರಿಯನ್ನು ನಾರಾಯಣಿ ಎಂಬುದಾಗಿ ಸಂಬೋಧಿಸಿದ್ದಾರೆ. ಪತ್ನಿಯು ನಾರಾಯಣಿಯಾದರೆ ಪತಿಯಾದ ರುದ್ರನು ನಾರಾಯಣನೇ ಆಗಬೇಕು ಎಂದು ಹೇಳುತ್ತಾರೆ. ಶ್ರೀವಿಜಯೀಂದ್ರರು ಓ ಹೋ! ಹೆಂಡತಿಯಿಂದಾಗಿ ಗಂಡನಿಗೆ ಪ್ರಸಿದ್ಧಿಬರುವುದೋ ಹಾಗಾದರೆ ರಾಣಿಗೆ ಮಹಿಷಿ ಎಂದು ಹೆಸರು. ಇದರಿಂದಾಗಿ ರಾಜನನ್ನು ಮಹಿಷ(ಎಮ್ಮೆ) ಎಂದು ಕರೆಯಲಾಗುತ್ತದೆಯೇ ಎಂದು ಕೇಳುತ್ತಾರೆ. ಅಪ್ಪಯ್ಯ ದೀಕ್ಷಿತರು ನಿರುತ್ತರರಾಗುತ್ತಾರೆ. ಇದರಿಂದ ನಾರಾಯಣ ಎಂಬ ನಾಮವು ವಿಷ್ಣುವನ್ನು ಮಾತ್ರ ಪ್ರತಿಪಾದಿಸುತ್ತದೆ ಎಂದು ತಿಳಿಯುತ್ತದೆ. ಈ ಘಟನೆಯು ಶ್ರೀಮಧ್ವರು ಬ್ರಹ್ಮಸೂತ್ರಭಾಷ್ಯದಲ್ಲಿ ಉದಾಹರಿಸಿದ ಪುರಾಣವಾಕ್ಯಕ್ಕೆ ಸಾಕ್ಷಿಯಂತಿದೆ.

**ಋತೇ ನಾರಾಯಣಾದೀನಿ ನಾಮಾನಿ ಪುರುಷೋತ್ತಮಃ।**

**ಪ್ರಾದಾದನ್ಯತ್ರ ಭಗವಾನ್ ರಾಜೇವರ್ತೇ ಸ್ವಕಂ ಪುರಂ॥**

ರಾಜನು ತನ್ನ ಸ್ವಂತ ಅರಮನೆಯೊಂದನ್ನು ಬಿಟ್ಟು ಉಳಿದೆಲ್ಲವುಗಳನ್ನು ಕೂಡ ಬೇರೆಯವರಿಗೆ ಕೊಡುವಂತೆ ಶ್ರೀವಿಷ್ಣುವು ನಾರಾಯಣನೇ ಮೊದಲಾದಂತಹ ಕೆಲವು ತನ್ನನ್ನು ಮಾತ್ರ ಪ್ರತಿಪಾದಿಸುವಂತಹ ಶಬ್ದಗಳನ್ನು ಬಿಟ್ಟು ಉಳಿದೆಲ್ಲವುಗಳನ್ನು ಕೂಡ ಬೇರೆ ಬೇರೆಯವರಿಗೆ ಕೊಟ್ಟನು ಎಂದು ತಿಳಿಸಿದ್ದಾರೆ. ಇದರಿಂದ ನಾರಾಯಣ ಎಂಬ ಹೆಸರನ್ನು ಭಗವಂತ ಯಾರಿಗೂ ಕೊಟ್ಟಿಲ್ಲ ಎಂದು ತಿಳಿಯುತ್ತದೆ. ಭಗವಂತನನ್ನೇ ಪ್ರತಿಪಾದಿಸುವ ನಾರಾಯಣ ಎಂಬ ಹೆಸರಿನ ಭಗವಂತನ ರೂಪವನ್ನು ನಾರಾಯಣ ಮಂತ್ರದಿಂದ ಸದಾ ಧ್ಯಾನಿಸಬೇಕು. ಈ ಮಂತ್ರದ ಫಲವನ್ನು ಶ್ರೀಮಧ್ವಾಚಾರ್ಯರು ಕೃಷ್ಣಾಮೃತಮಹಾರ್ಣವ ಗ್ರಂಥದಲ್ಲಿ ಯಮನ ಮಾತನ್ನು ಉದಾಹರಿಸುತ್ತಾ ತಿಳಿಸಿದ್ದಾರೆ.

**ನಾರಾಯಣೇತಿ ಮಂತ್ರೋಸ್ತಿ ವಾಗಸ್ತಿ ವಶವರ್ತಿನೀ ।**

**ತಥಾಪಿ ನರಕೇ ಘೋರೇ ಪತಂತೀತ್ಯೇತದದ್ಭುತಮ್॥**

ನಾರಾಯಣ ಎಂಬ ಮಂತ್ರವಿದೆ ನಾಲಿಗೆ ಕೂಡ ನಮ್ಮ ವಶದಲ್ಲಿದೆ. ಆದರೂ ಕೂಡ ಮನುಷ್ಯರು ನರಕದಲ್ಲಿ ಬೀಳುತ್ತಾರೆ ಎಂಬುದು ಅತ್ಯಂತ ಅದ್ಭುತವಾದ ವಿಷಯ. ಅಂದರೆ ಈ ನಾರಾಯಣ ಮಂತ್ರವನ್ನು ಜಪಿಸಿದವರಿಗೆ ನರಕ ದರ್ಶನವೆಂಬುದು ಇಲ್ಲವೇ ಇಲ್ಲ. ಅವರಿಗೆ ಸದ್ಗತಿಯೇ ಆಗುತ್ತದೆ ಎಂದು ಅರ್ಥ. ಅಂತಹ ಸದ್ಗತಿದಾಯಕವಾದ ನಾರಾಯಣ ಮಂತ್ರವನ್ನು ಜಪಿಸಿ ಮಂತ್ರಪ್ರತಿಪಾದ್ಯವಾದ ಭಗವದ್ರೂಪವನ್ನು ಧ್ಯಾನಿಸಿ ನಾರಾಯಣರೂಪಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗೋಣ.

---

**ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತನಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.**

# ನೆನಪಿನ ಅಂಗಳ

ವಿ॥ ಶಂಕರನಾರಾಯಣಾಚಾರ್ಯ

1) 21 ತತ್ವಾಭಿಮಾನಿ ದೇವತೆಗಳಿಗೆ ಗುರು ಎನಿಸಿದವರು ಯಾರು?

2) ಪರಮ ಭಾಗವತರು ಯಾರು?

3) ವಾಲ್ಮೀಕಿ ರಾಮಾಯಣದ ಪ್ರಧಾನ ಛಂದಸ್ ಯಾವುದು?

4) ಅನುಷ್ಟುಪ್ ಛಂದಸ್ಸಿನಲ್ಲಿ ಎಷ್ಟು ಅಕ್ಷರಗಳಿವೆ?

5) ವಾಲ್ಮೀಕಿ ರಾಮಾಯಣ ಯಾವ ಭಾಷೆಯಲ್ಲಿದೆ?

6) 'ಭಾರತ ತೀರ್ಥ' ಯಾರ ಕೃತಿ?

7) 'ಯೋಗಃ ಕರ್ಮಸು ಕೌಶಲಂ' ಎಂದವರು ಯಾರು?

8) 'ಜಯಾಶ್ವ' ಯಾರ ಮಗ?

9) ಮಹಾಭಾರತ ಯುದ್ಧದಲ್ಲಿ ಬದುಕಿ ಉಳಿದ ಧಾರ್ತರಾಷ್ಟ್ರ ಯಾರು?

10) ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ಯಾರು ನೀಡಿದ್ದರು?

**ಕಳೆದ ಸಂಚಿಕೆಯ ಉತ್ತರ:**

1) ಶ್ರೀಜಗನ್ನಾಥದಾಸರು 2) ಗುರುಗಳು 3) 24ನೆಯ ತ್ರೇತಾಯುಗದಲ್ಲಿ 4) ನದಿಯ ಹೆಸರು 5) ಗಂಗಾನದಿ ಹಾಗೂ ಅಯೋಧ್ಯೆಯ ನಡುವೆ 6) ನರ್ಮದಾ ನದಿಯ ತೀರದಲ್ಲಿ 7) ಅರ್ಜುನನ ಮಾತು 8) ಸಿ. ಗೋಪಾಲಕೃಷ್ಣ ಶಾಸ್ತ್ರಿ 9) ಅರ್ಜುನನಿಗೆ 10) ಶ್ರೀಕೃಷ್ಣ

| | | | | | | |
|---|---|---|---|---|---|---|
| | 1 ಸು | ಮ | 2 ವ | ದ | 3 ನ | |
| 4 ಮ | ರ | | ರು | | 5 ಗ | 6 ರ |
| ಧು | | 7 ಮೆ | ಣ | 8 ಸು | | ಘು |
| ಸೂ | | ಲು | | 9 ನ | ಮ | ನಂ |
| ದ | | 12 ಕು | 13 ವ | ರ | | ದ |
| 11 ನ | 14 ದ | | ನ | | | ನ |
| | 15 ಕ್ಷ | ತ | ಜ | ವಾ | ನ | |

ಪ್ರಾಣಿ ಹಿಂಸೆ ಮಾಡಬೇಡಿ

**ಎಡದಿಂದ ಬಲಕ್ಕೆ:**

1) ರಘುವಂಶ ಶೂರ ಈ ರಾಮ (6)
4) ಕಥೆಯೊಳಗಣ ಈ ಅಂಶಮುಖ್ಯ (2)
5) ಬಲು ತುಂಟಿ ಈ ಹೆಣ್ಣು (3)
6) ಧ್ಯಾನವನ್ನು ಇದರಿಂದ ಕಲಿತುಕೋ (2)
8) ಎರಡಕ್ಷರದ ಮದುವೆ, ನಿಧಾನವಾದಾಗ (3)
11) ಖಡ್ಗ, ಕೈಯಲ್ಲಿರುವ ಮಾನವ (4)



ಉತ್ತರ ಮುಂದಿನ ಸಂಚಿಕೆಯಲ್ಲಿ

**ಮೇಲಿನಿಂದ ಕೆಳಕ್ಕೆ:**

1) ರಜೆಯ ರಾತ್ರಿಗೆ ಈ ಹೆಸರು (3)
2) ಕುಮಾರಿಯೊಳಗಣ ಮರಿಮೃಗ (2)
3) ಶೂರನಿಗೆ ಹುಟ್ಟಿದ ಧೀರೆ (3)
5) ಪಂಪ ವರ್ಣಿಸಿದ ಊರು (4)
6) ಬಲವಂತನ ಬಳಿಯಿರುವ ಜಾಲ (2)
7) ಹಣೆಗೆ ಹಾಕುವ ಬೊಟ್ಟು (3)
9) ಖಾಲಿ ಕೈ ಸಂಸ್ಕೃತದಲ್ಲಿ (4)

ನೀಚರನಾಶ್ರಯಿಸಿ ಕೆಡಬೇಡಿ.